ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಅಕ್ಟೋಬರ್ 20, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 158 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ವೈದ್ಯರ ಗ್ರಾಮೀಣ ಸೇವೆ ಇನ್ನು ಕಡ್ಡಾಯವಿಲ್ಲ

ಬೆಂಗಳೂರು, ಅ. 19 – ಇನ್ನೂ 21 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲು ರಾಜ್ಯ ಸಂಪುಟ ನಿರ್ಧಾರ ತೆಗೆದುಕೊಂಡಿದೆ. ಇದರಿಂದ ಒಟ್ಟು ಬರಪೀಡಿತ ತಾಲ್ಲೂಕುಗಳ ಸಂಖ್ಯೆ 216ಕ್ಕೆ ಏರಿಕೆಯಾಗಿದೆ.

ಬರದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 5,326.87 ಕೋಟಿ ರೂ.ಗಳ ಪರಿಹಾರ ನೀಡಬೇಕು ಎಂದು ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಸಂಪುಟ ಸಭೆಯ ನಂತರ ತಿಳಿಸಿದ್ದಾರೆ.

ಸರ್ಕಾರ ಈ ಹಿಂದೆ 195 ತಾಲ್ಲೂಕುಗಳನ್ನು ಬರ ಪೀಡಿತ ಎಂದು



ಘೋಷಿಸಲಾಗಿತ್ತು. ಇಂದಿನ ನಿರ್ಧಾರದೊಂದಿಗೆ ರಾಜ್ಯದ 236 ತಾಲ್ಲೂಕುಗಳ ಪೈಕಿ 216 ಬರ ಪೀಡಿತ ಎಂದು ಘೋಷಿಸಿದಂತಾಗಿದೆ.

ಬರದ ಕಾರಣದಿಂದಾಗಿ ರಾಜ್ಯಕ್ಕೆ

**ಇನ್ನೂ 21 ತಾಲ್ಲೂಕುಗಳು ಬರ ಪೀಡಿತ**

**100 ಗ್ರಾಮ ನ್ಯಾಯಾಲಯಗಳ ಸ್ಥಾಪನೆ**

**ರಾಜ್ಯ ಅನಿಲ ನೀತಿಗೆ ಸಮ್ಮತಿ**

33,770 ಕೋಟಿ ರೂ.ಗಳ ನಷ್ಟವಾಗಿದೆ. ರಾಜ್ಯ ಸರ್ಕಾರ ಕೇಂದ್ರದಿಂದ 4,414 ಕೋಟಿ ರೂ.ಗಳ ಪರಿಹಾರ ಕೇಳಿದೆ. ಜಾನುವಾರುಗಳ ನಾಶದ ಹಿನ್ನೆಲೆಯಲ್ಲಿ 355 ಕೋಟಿ ರೂ. ಹಾಗೂ ಕುಡಿಯುವ ನೀರಿನ ಪರಿಹಾರವಾಗಿ 554 ಕೋಟಿ ರೂ.ಗಳ ಪರಿಹಾರ ಕೇಳಲಾಗಿದೆ. ಒಟ್ಟಾರೆ ಕೇಳಿರುವ ಪರಿಹಾರ 5,326.87 ಕೋಟಿ ರೂ. ಎಂದವರು ತಿಳಿಸಿದ್ದಾರೆ.

ಖುದ್ದು ಪರಿಹಾರ ಕೇಳುವ ಸಲುವಾಗಿ ಕೇಂದ್ರ ಸಚಿವರನ್ನು ಭೇಟಿ ಮಾಡಲು ರಾಜ್ಯ ಸಚಿವರಿಗೆ ಅನುಮತಿ ನೀಡುವುದನ್ನು ವಿಳಂಬ ಮಾಡಲಾಗುತ್ತಿದೆ. ಕಂದಾಯ ಸಚಿವರು ದೆಹಲಿಗೆ ತೆರಳಿ ತ್ವರಿತವಾಗಿ ಪರಿಹಾರ ಕೇಳಬೇಕೆಂದು ಮುಖ್ಯಮಂತ್ರಿ ತಿಳಿಸಿದ್ದಾರೆ ಎಂದೂ ಪಾಟೀಲ್ **(5ನೇ ಪುಟಕ್ಕೆ)**

## ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರಾಗಿ ಪರಶುರಾಮಪ್ಪ



ದಾವಣಗೆರೆ, ಅ. 19 - ಜಿಲ್ಲಾ ಕುರುಬರ ಸಂಘದ ಹಂಗಾಮಿ ಅಧ್ಯಕ್ಷರಾಗಿ ಕುರುಬ ಸಮಾಜದ ಹಿರಿಯ ಮುಖಂಡ ಬಿ.ಹೆಚ್. ಪರಶುರಾಮಪ್ಪ ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಹಿರಿಯ ವಕೀಲ ಲೋಕಿಕೆರೆ ಸಿದ್ದಪ್ಪ ತಿಳಿಸಿದ್ದಾರೆ.

ಸಂಘದ ಕಚೇರಿಯಲ್ಲಿ ಸಂಘದ ಖಜಾಂಚಿ ಯಾಗಿದ್ದ ಬಿ.ಹೆಚ್. ಪರಶುರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಂಘದ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ಮೂಲತಃ ಜಗಳೂರು ತಾಲ್ಲೂಕಿನ ಬಿಳಿಚೋಡು ಗ್ರಾಮದವರಾದ ಬಿ.ಹೆಚ್. ಪರಶುರಾಮಪ್ಪ ವೃತ್ತಿಯಲ್ಲಿ ಇಂಜಿನಿಯರ್ **(2ನೇ ಪುಟಕ್ಕೆ)**

## ಡೀಮ್ಡ್ ವಿವಿಯಿಂದ ಎಸ್ಸೆಸ್‌ಗೆ ಗೌರವ ಡಾಕ್ಟರೇಟ್



ದಾವಣಗೆರೆ,ಅ.19- ರಾಜ್ಯದ ವಿಜಯಪುರದ ಡೀಮ್ಡ್ ವಿಶ್ವವಿದ್ಯಾಲಯವು (ಬಿಎಲ್‌ಡಿಇ) ಸಾಧಕರಿಗೆ ಕೊಡಮಾಡುವ ಗೌರವ ಡಾಕ್ಟರೇಟ್ ಅನ್ನು ಈ ಬಾರಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರಿಗೆ ನೀಡಿದೆ.

ಎಸ್ಸೆಸ್ ಅವರು ಸಮಾಜಕ್ಕೆ ಸಲ್ಲಿಸುತ್ತಿರುವ ಅನುಪಮ ಸೇವೆಯನ್ನು ಪರಿಗಣಿಸಿ ಈ ಗೌರವ ನೀಡಲು ತೀರ್ಮಾನಿಸಲಾಗಿದೆ ಎಂದು ಶ್ರೀ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ (ವಿಜಯಪುರ)ದ ಪ್ರಕಟಣೆ ತಿಳಿಸಿದೆ. ನಾಳೆ ದಿನಾಂಕ 20ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಬಿಎಲ್‌ಡಿಇ ಸಭಾಂಗಣ ಭವನದಲ್ಲಿ ಏರ್ಪಾಡಾಗಿರುವ ಡೀಮ್ಡ್ ವಿಶ್ವವಿದ್ಯಾಲಯದ 11ನೇ **(5ನೇ ಪುಟಕ್ಕೆ)**




## ಬೇತೂರು ಪ್ರಭಣ್ಣ ನಿಧನ



ದಾವಣಗೆರೆ ಸಿಟಿ ಎಸ್.ಎಸ್.ಬಡಾವಣೆ, 3ನೇ ಮೇನ್, 1ನೇ ಕ್ರಾಸ್ ವಾಸಿ
ಬೇತೂರು ಟ್ರೇಡರ್ಸ್‌ಮತ್ತು ಬೇತೂರು ಇಂಡಸ್ಟ್ರೀಸ್ ಮಾಲೀಕರಾದ

**ಬೇತೂರು ಪ್ರಭಣ್ಣ**

ಇವರು, ದಿನಾಂಕ 20.10.2023ರ ಶುಕ್ರವಾರ ಬೆಳಗಿನ ಜಾವ 1.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 86 ವರ್ಷ ವಯಸ್ಸಾಗಿತ್ತು.
ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.10.2023ರ ಶುಕ್ರವಾರ ಸಂಜೆ 4 ಗಂಟೆಗೆ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ : 99640 89189, 98455 39981**

## ತೃತೀಯ ವರ್ಷದ ಪುಣ್ಯಸ್ಮರಣೆ



ಜನನ : 24-05-1964
ಮರಣ : 20-10-2020

ಉಸಿರು ಹೋದರೂ ಹೆಸರು ಉಳಿಸಿದ

**ಶರಣ ಶ್ರೀ ಬಿ.ಕೆ. ರುದ್ರಮುನಿ**

ಮಾಲೀಕರು, ಶ್ರೀ ಆಂಜನೇಯ ಸ್ಟೋನ್ ಕ್ರಷರ್, ಆಲೂರು

ನಿಮ್ಮ ನೆನಪು ನಮ್ಮಲ್ಲಿ ಸದಾ ಹಚ್ಚ ಹಸಿರಾಗಿದ್ದು,
ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು
ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ.
ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ : ಶ್ರೀಮತಿ ಶೋಭ ರುದ್ರಮುನಿ
ಮಕ್ಕಳು : ಶ್ರೀ ಆರ್. ಅನೂಪ್, ಶ್ರೀ ಆರ್. ಆಶಿಕ್
ಹಾಗೂ ಕುಟುಂಬ ವರ್ಗದವರು
ಮತ್ತು ಬಂಧು-ಮಿತ್ರರು. ಮೊ. : 97419 35676

## ಹುಟ್ಟುಹಬ್ಬದ ಶುಭಾಶಯಗಳು



ಪಟ್ಟಣ ಬ್ಯಾಂಕಿಂಗ್ ಕ್ಷೇತ್ರದಲ್ಲಿ ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತಂದೆಯವರ ಕೃಪಾಶೀರ್ವಾದದೊಂದಿಗೆ ಅಪಾರ ಸಾಧನೆಯನ್ನು ಮಾಡಿರುವ ನಮ್ಮ ಬ್ಯಾಂಕಿನ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳು, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳು, ಕಲಾ ಪ್ರಕಾಶ ವೃಂದದ ನಿರ್ದೇಶಕರು, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ಮಾಜಿ ಅಧ್ಯಕ್ಷರು, ನಗರದ ಶ್ರೀಶೈಲ ಪೀಠದ ಸದಸ್ಯರು, ಸಹಕಾರಿ ಯುವ ಧುರೀಣರು ಆದ

**ಶ್ರೀಯುತ ಎನ್.ಎ. ಮುರುಗೇಶ್**

ಇವರಿಗೆ ಜನ್ಮ ದಿನದ ಶುಭಾಶಯಗಳು.

ಶ್ರೀಯುತರಿಗೆ ಈ ಶುಭ ಸಂದರ್ಭದಲ್ಲಿ ಭಗವಂತನು ಇನ್ನೂ ಹೆಚ್ಚಿನ ಆಯುರಾರೋಗ್ಯ, ಭಾಗ್ಯ ನೀಡಿ ಮತ್ತಷ್ಟು ಸಮಾಜಮುಖಿಯಾಗಿ ಬ್ಯಾಂಕಿಂಗ್ ಕ್ಷೇತ್ರವನ್ನು ವಿಸ್ತರಿಸುವ ಚೈತನ್ಯ ಹಾಗೂ ಸಾಮರ್ಥ್ಯ ನೀಡಲಿ ಎಂದು ಶುಭ ಹಾರೈಸುತ್ತೇವೆ.

ಶ್ರೀಮತಿ ಜಯಮ್ಮ ಪರಶುರಾಮಪ್ಪ, ಉಪಾಧ್ಯಕ್ಷರು

ನಿರ್ದೇಶಕರುಗಳು :

- ಶ್ರೀ ಕಿರುವಾಡಿ ವಿ. ಸೋಮಶೇಖರ್
- ಶ್ರೀ ಕುಬೇರಪ್ಪ ಎ. ಹೆಚ್.
- ಶ್ರೀ ಶಂಕರ್ ಖಟಾವ್‌ಕರ್
- ಶ್ರೀ ಪ್ರಭು ಪ್ರಸಾದ್ ಎಸ್.ಕೆ.
- ಶ್ರೀ ಜ್ಯೋತಿ ಪ್ರಕಾಶ್ ಕೆ.ಎಂ.
- ಶ್ರೀ ಚಿದಾನಂದಪ್ಪ ಬಿ.
- ಶ್ರೀ ವೆಂಕಪ್ಪ ಪಿ.ಹೆಚ್.
- ಶ್ರೀ ನಾಗೇಂದ್ರಚಾರಿ ಬಿ.
- ಶ್ರೀ ಕೊಟ್ರೇಶ್ ಎ.
- ಶ್ರೀಮತಿ ಉಮಾ ವಾಗೀಶ್
- ಶ್ರೀ ವಿಶಾಲ್‌ಕುಮಾರ್ ಆರ್. ಸಂಘವಿ
- ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್
- ಶ್ರೀಮತಿ ಅನೂಪ ಡಾ. ವೀರೇಂದ್ರಸ್ವಾಮಿ

ವೃತ್ತಿಪರ ನಿರ್ದೇಶಕರು : ✦ ಶ್ರೀ ಆರ್.ವಿ. ಶಿರಸಾಲಿಮಠ್ ✦ ಶ್ರೀ ಕಿರಣ್ ಆರ್. ಶೆಟ್ಟಿ

ವ್ಯವಸ್ಥಾಪನಾ ಮಂಡಲಿ ಅಧ್ಯಕ್ಷರು : ✦ ಶ್ರೀ ಕುಬೇರಪ್ಪ ಎ.ಹೆಚ್.

ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು : ✦ ಶ್ರೀ ಕಿರುವಾಡಿ ವಿ. ಸೋಮಶೇಖರ್ ✦ ಶ್ರೀ ಕೆ.ಎಂ. ಬಸವರಾಜ್ ✦ ಶ್ರೀಮತಿ ಜಿ.ಸಿ. ವಸುಂಧರ ✦ ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ

ಪ್ರಧಾನ ವ್ಯವಸ್ಥಾಪಕರು : ✦ ಶ್ರೀ ತುಳಸಿನಾಥ್ ಎನ್. ಹಾಗೂ ಸಿಬ್ಬಂದಿ ವರ್ಗದವರು

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 East, 40x60 East, 40x60 South, 40x60 North 120 ಅಡಿ ರೋಡ್‌ಗಿದೆ. 30x40 East, 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: **72046 33302**

**ಮನೆಗಳು ಬಾಡಿಗೆಗೆ ಇವೆ**
ಶ್ರೀನಿವಾಸ ನಗರ 10ನೇ ಕ್ರಾಸ್, 2ನೇ ಮಹಡಿಯಲ್ಲಿ 1BHK, 10x30, 10x30 ಎರಡು ಸೀಟಿನ ಮನೆ ಮಾರಾಟಕ್ಕಿವೆ. ದೇವರಾಜ ಸೊಸೈಟಿ ಹತ್ತಿರ, ಲೆನಿನ್ ನಗರ, ದಾವಣಗೆರೆ.
**98800 68009**

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಿಕೊಡಲಾಗುವುದು.
**99863 61250, 80730 24690**

**ಮನೆ ಬಾಡಿಗೆ ಇದೆ**
1st ಫ್ಲೋರ್, 2 ಬೆಡ್ ರೂಂ S S ಲೇ ಔಟ್ B ಬ್ಲಾಕ್ ನವೋದಯ ( Edu Asia) school ಹತ್ತಿರ, ದಾವಣಗೆರೆ.
**90196 81452**

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 70x62 ಕಾರ್ನರ್ 40x62 West, 30x62 ಕಾರ್ನರ್, 30x45 ಕಾರ್ನರ್ 40x40 South, 30x50 East ಸೈಟುಗಳು ಮಾರಾಟಕ್ಕಿವೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟ್ ಬೇಕಾಗಿದೆ**
ದಾವಣಗೆರೆ ಪಿಬಿ ರಸ್ತೆ ಕರೂರ್ ಇಂಡಸ್ಟ್ರಿಯಲ್ ಏರಿಯಾ ಹಾಗೂ ಸುತ್ತಮುತ್ತಲಿನಲ್ಲಿ 3000 ದಿಂದ 5000ಚ.ಅ. ಇಂಡಸ್ಟ್ರಿಯಲ್ ಸೈಟ್ ಖರೀದಿಗೆ ಬೇಕಾಗಿದೆ.
**98444 87585**

**EC / ಇಸಿ, E-swathu, Khatha Change Building Licence & Property Documents, Loans-All banks**
**96118-66449**

**ಬಾಡಿಗೆಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ವಿದ್ಯಾನಗರದಲ್ಲಿ 40x60 North, ಡುಪ್ಲೆಕ್ಸ್ ಮೂರು ಬೆಡ್ ರೂಂ., ನಿಜಲಿಂಗಪ್ಪ ಬಡಾವಣೆಯಲ್ಲಿ 40x60ರಲ್ಲಿ South, ಮೂರು ಬೆಡ್ ರೂಮ್ ಮನೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆಯಲ್ಲೇ ಉಳಿದುಕೊಂಡು ಕೆಲಸ ಮಾಡಿಕೊಂಡು ಹೋಗುವ ಹಿಂದೂ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
**90353 77102**

**WANTED**
Office staff female =4 nos (smart looking and good communication skill and compute knowledge, language knowns kannada, hindi, English, marathi )good salary +incentive more details contact :
80505 10329 WhatsApp
**7259782546**
send the photo's and BIODATA

**IMMEDIATELY WANTED LADY TEACHERS**
BA., BEd., - 2, BSc., BEd., - 2
Attractive Salary will be given right & experienced candidates only
**95356 10817**

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ದೋಸೆ ಹಾಗೂ ತಿಂಡಿಗಳನ್ನು ಮಾಡಲು ಆಲ್ ರೌಂಡರ್ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
**78991 18395, 96977 77746**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಸೈಟುಗಳು ಮಾರಾಟಕ್ಕೆ ಇವೆ**
ಮಹಾಲಕ್ಷ್ಮಿ ಲೇಔಟ್ ಪಕ್ಕ 30x30, 30x40, 30x50, ಮಾಲೀಕರೇ ನೇರ ಸಂಪರ್ಕ.
**99807 51434**
**86185 94390**

**JOB OPPORTUNITY**
Looking for fluent English speaking Telecallers. This position offers the flexibility to work from the office or at home. Elevate your career with us!
Call :
**82969 57816**

**ಬೇಕಾಗಿದ್ದಾರೆ**
ಆಟೋ ಮೊಬೈಲ್ಸ್ ಅಂಗಡಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
**97429 12258**

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician ಬೇಕಾಗಿದ್ದಾರೆ. ಸಂಬಳ +ಇನ್ಸೆಂಟಿವ್ಸ್ ನೀಡುತ್ತೇವೆ. ಸಿಸ್ಟಂ ವರ್ಕ್‌ಗೆ ಲೇಡಿ ಬೇಕಾಗಿದ್ದಾರೆ.
**98805 31599**

**ಬೇಕಾಗಿದ್ದಾರೆ**
SSLC / PUC / ITI / DIPLOMA ಪಾಸ್ / ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಜ್ಯೋತಿ ಮೆಟಲ್ಸ್
ಹಳೇ ಬಸ್ಟ್ಯಾಂಡ್.ಪಿ.ಬಿ.ರಸ್ತೆ, ಗಣಪತಿ ಗುಡಿ ಪಕ್ಕ, ದಾವಣಗೆರೆ.
**98800 34643**

**SAMRUDDHI COCHING ACADEMY DAVANGERE.**
Physics & Biology faculty required
Experience : more than 2 years, salary : 2 to 2.5 lakh per annum.
Contact : **72045 99979**

**IIT FOUNDATION MATHS**
From 5th, 6th, 7th Classes
**Bruit Academy**
Nijalingappa Badavane
**M : 97390 66956**

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
**96863 96992**

**ಸೈಟ್ ಮಾರಾಟಕ್ಕೆ**
ನಿಟ್ಟುವಳ್ಳಿ ವಿಭಾಗ ಸರಸ್ವತಿ ಬಡಾವಣೆ ಶ್ರೀ ದುರ್ಗಾಂಬಿಕಾ ಹೈಸ್ಕೂಲ್ ರಸ್ತೆಯಲ್ಲಿ 35x45 ಅಳತೆಯ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ.
**93532 88317**

**ಬೇಕಾಗಿದ್ದಾರೆ**
ದಾವಣಗೆರೆ ತಾಲ್ಲೂಕಿನಲ್ಲಿ ಬರುವ ಅನುದಾನಿತ ಪ್ರೌಢಶಾಲೆಗೆ ತಾತ್ಕಾಲಿಕವಾಗಿ ಹಿಂದಿ ಭಾಷಾ ವಿಷಯ ಬೋಧಿಸಲು ಶಿಕ್ಷಕ-ಶಿಕ್ಷಕಿಯರು ಬೇಕಾಗಿದ್ದಾರೆ. (ನವೆಂಬರ್ 1 ರಿಂದ)
**9538215550, 9901658878**
ಮುಖ್ಯೋಪಾಧ್ಯಾಯರು

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
**98442-94446**

**SALES GIRL REQUIRED**
Experienced Sales Staff needed for innerwear Store
**WOMEN'S PARADISE**
AVK college Road, Davangere
**96204 53208**

**4BHK ಮನೆ ಬಾಡಿಗೆಗೆ ಇದೆ**
(ಕಮರ್ಷಿಯಲ್ ಪರ್ಪೋಸ್) ಎಂ.ಸಿ.ಸಿ. 'ಎ' ಬ್ಲಾಕ್‌ನ ಮುಖ್ಯ ಸತ್ಸಂಗ ರಸ್ತೆಯಲ್ಲಿ (ತೋಗಟವೀರ ಕಲ್ಯಾಣ ಮಂಟಪ ರೋಡ್) ನವೀಕರಿಸಲಾದ ಮನೆ ವಾಣಿಜ್ಯ ಉದ್ದೇಶಕ್ಕಾಗಿ (Office, Agency, Pharmacy, Poly Clinic, Co-Operative Society) ಬಾಡಿಗೆಗೆ ಇದೆ. ಸಂಪರ್ಕಿಸಿ. :
**98868 17252**

**ಕೆಲಸಕ್ಕೆ ಬೇಕಾಗಿದ್ದಾರೆ**
ತೋಟದ ಕೆಲಸಕ್ಕೆ ಕುಟುಂಬ ಸಮೇತ ಬೇಕಾಗಿದ್ದಾರೆ. ಅವರಿಗೆ ವಸತಿ ವ್ಯವಸ್ಥೆ ಸಹ ಇರುತ್ತದೆ.
ವಿಚಾರಿಸಿ.
**+91 70190 26616**

**ಸೈಟ್ ಮಾರಾಟಕ್ಕೆ**
ನಿಟ್ಟುವಳ್ಳಿ ವಿಭಾಗ ಸರಸ್ವತಿ ಬಡಾವಣೆ ಶ್ರೀ ದುರ್ಗಾಂಬಿಕಾ ಹೈಸ್ಕೂಲ್ ರಸ್ತೆಯಲ್ಲಿ 35x45 ಅಳತೆಯ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ.
**93532 88317**

**ಬೇಕಾಗಿದ್ದಾರೆ**
**S.V. MARKETING DAVANGERE**
P.B. Road, (Harihara Road)
ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
**94480 46571, 78993 37571**

**AVOID MOSQUITOES**
Mosquito Net For Doors & Windowes.
**SRI GOWRI ENTERPRISES**
# 7C2, 4th Cross, Near Shaneshwara Temple, Karur Industrial Area, P.B. Road, Davangere-6
**72049 94628**


**SN ENTERPRISES**
ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ
Girls work: Office Work and Telecalling (Unmarried) Basic Salary : 9000/-, Boys work : Office work and Field Work. Basic Salary 13,000/- Girls : 85480 47353 Boys :97400 29866

**ಬೆಳ್ಳಿ ಪೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಪೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಸಿಲ್ವರ್ 999 ಬೆಳ್ಳಿ ಪೋಟೋಗಳು ರೂ. 95, 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಪೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮಿ ಬಾಲಾಜಿ ಸಿಲ್ವರ್ ಪೋಟೋ ಫ್ರೇಮ್ಸ್
ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಮೊ. : **99451 59582**

**ಮನೆ ಬಾಡಿಗೆಗೆ ಇದೆ**
ಸಾಯಿಬಾಬಾ ದೇವಸ್ಥಾನ ಹಿಂಭಾಗ ಎಂ.ಸಿ.ಸಿ. ಎ ಬ್ಲಾಕ್, (ಪೂರ್ವ) 3BHK (ಪೂರ್ವ) 3BHK (ರೂ.7500) (ಸಸ್ಯಹಾರಿಗಳಿಗೆ ಮಾತ್ರ) Veg Only
**70196 18397**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ


**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಕ್ಷಿಣ ಭಾರತದ 8 ದಿನಗಳ ಸುಖಕರ ಪ್ರವಾಸ, ಶಿವಕಂಚಿ, ವಿಷ್ಣುಕಂಚಿ, ಮಹಾಬಲಿಪುರ, ಪಾಂಡಿಚೇರಿ ಕುಂಭಕೋಣಂ, ಚಿದಂಬರಂ, ತಂಜಾವೂರು, ಶ್ರೀರಂಗಂ, ರಾಮೇಶ್ವರ, ಕನ್ಯಾಕುಮಾರಿ, ಮಧುರೈ, ತ್ರಿಪುರಾಕೋದ್ರಂ, ಪಳನಿ, ಮೈಸೂರು ತಿರುಚಂದೂರು
ದಿನಾಂಕ : 26.10.2023ರ ಗುರುವಾರ ರಾತ್ರಿ 10 ಗಂಟೆಗೆ ಬಕ್ಕೇಶ್ವರ ಶಾಲೆ ಹತ್ತಿರ, ಸ್ವಾಮಿ ಅಯ್ಯಪ್ಪ ದೇವಸ್ಥಾನದಿಂದ ಹೊರಡುವುದು.
**94485 33928, 99800 32271**

**ಕುಮಾರಸ್ವಾಮಿ ನಿಧನ**

ದಾವಣಗೆರೆ ಸಿಟಿ ವಿನೋಬ ನಗರ, 1ನೇ ಮೇನ್, 14ನೇ ಕ್ರಾಸ್, ಖಾನ್ ಚಿಕನ್ ಸೆಂಟರ್ ಎದುರು ವಾಸಿ
**ಕುಮಾರಸ್ವಾಮಿ ಹೆಚ್. (80)**
ಇವರು ದಿನಾಂಕ 19.10.2023ರ ಗುರುವಾರ ಸಂಜೆ 4.30ಕ್ಕೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.10.2023ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ, ಮೊ : 99160 35391, 77954 14161, 74835 33974

**REQUIRED**
BACK OFFICE STAFF AND SALES EXECUTIVE,SALES MANAGER,TELE CALLERS
Urban money pvt ltd is corporate loan DSA is looking Back office female staff required. Candidate should have knowledge about logins and disbursement, MIS maintaing
**99805 70746**

**ಡಾ. ಹೆಚ್.ಎಸ್ ಅನಿತಾ ನಿಧನ**

ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 4ನೇ ಕ್ರಾಸ್ ವಾಸಿ
**ದಾವಣಗೆರೆ ವಿಶ್ವವಿದ್ಯಾಲಯದ ಡಿಪಾರ್ಟ್‌ಮೆಂಟ್ ಆಫ್ ಎಂ.ಕಾಂ.ನ**
**ಪ್ರೊ. ಡಾ. ಹೆಚ್.ಎಸ್ ಅನಿತಾ**
ಇವರು ದಿನಾಂಕ 19.10.2023ರ ಗುರುವಾರ ತಡರಾತ್ರಿ12.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 59 ವರ್ಷ ವಯಸ್ಸಾಗಿತ್ತು. ಮೃತರು ಪತಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.10.2023ರ ಶುಕ್ರವಾರ ಸಂಜೆ 4 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ,
ಮೊ : 87468 20889, 90086 90494

**ಮೂರನೇ ವರ್ಷದ ಪುಣ್ಯಸ್ಮರಣೆ**

**ಶರಣ ಟಿ. ಗಂಗಾಧರಪ್ಪ**
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷಗಳಾದವು... ಸದಾ ನಿಮ್ಮನ್ನು ನೆನೆಯುತ್ತಾ... ನೀವು ತೋರಿಸಿದ ಮಾರ್ಗದಲ್ಲಿ ಮುನ್ನಡೆಯುತ್ತಿದ್ದು....ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವವರು :
ಧರ್ಮಪತ್ನಿ : **ಶ್ರೀಮತಿ ಪಾರ್ವತಮ್ಮ ಗಂಗಾಧರಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಹೊನ್ನೂರು.**
**ಸಿದ್ಧಲಿಂಗೇಶ್ವರ ಮೆಡಿಕಲ್ಸ್, ದಾವಣಗೆರೆ.**

**ರಾಮಗೊಂಡನಹಳ್ಳಿ ಜಿ.ಷಣ್ಮುಖಪ್ಪ ನಿಧನ**

ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ದಿ. ಗ್ಯಾರಹಳ್ಳಿ ಜಯದೇವಪ್ಪನವರ ಪುತ್ರ ನಿವೃತ್ತ ಶಿಕ್ಷಕ
**ಜಿ.ಷಣ್ಮುಖಪ್ಪ**
ಇವರು ದಿನಾಂಕ 19.10.2023ರ ಗುರುವಾರ ಬೆಳಿಗ್ಗೆ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಮಕ್ಕಳು, ಮೂವರು ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.10.2023ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**
**ಮೊ : 99729 78478**


# ಸ್ವಗ್ರಾಮದಲ್ಲಿ ಜಗಳೂರು ಶಾಸಕ ದೇವೇಂದ್ರಪ್ಪ ಅವರಿಗೆ ಅದ್ದೂರಿ ಸನ್ಮಾನ



ಜಗಳೂರು, ಅ. 19 - ಹುಟ್ಟೂರು ಚಿಕ್ಕಮ್ಮನ ಹಟ್ಟಿಯನ್ನು ಓದು, ಸಾಮರಸ್ಯತೆಯಲ್ಲಿ ದೊಡ್ಡಮ್ಮನಹಟ್ಟಿ ಗ್ರಾಮವನ್ನಾಗಿಸುವೆ ಪಕ್ಷಾತೀತವಾಗಿ ಸರ್ವರೂ ಕೈಜೋಡಿಸಿ ಎಂದು ಶಾಸಕ ಬಿ. ದೇವೇಂದ್ರಪ್ಪ ಕರೆ ನೀಡಿದರು.

ತಾಲ್ಲೂಕಿನ ಚಿಕ್ಕಮ್ಮನಹಟ್ಟಿ ಗ್ರಾಮದಲ್ಲಿ ನೂತನ ನ್ಯಾಯಬೆಲೆ ಅಂಗಡಿ ಹಾಗೂ ವ್ಯಾಯಾಮ ಶಾಲೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೂಕ್ತ ಸಾರಿಗೆ ವ್ಯವಸ್ಥೆಯೂ ಇಲ್ಲದ ಚಿಕ್ಕಮ್ಮನಹಟ್ಟಿ ಫಲಾನುಭವಿಗಳು ದಿನವಿಡೀ ತಮ್ಮ ವೈಯಕ್ತಿಕ ಕೆಲಸ ಬದಿಗೊತ್ತಿ ಪಡಿತರ ದಾಸ್ತಾನು ಪಡೆಯಲು ಪಕ್ಕದ ಕಣ್ವಕುಪ್ಪೆ ಗ್ರಾಮಕ್ಕೆ ತೆರಳಬೇಕಿತ್ತು. ದಶಕಗಳ ಕನಸಿನ ನ್ಯಾಯಬೆಲೆ ಅಂಗಡಿ ಇಂದು ನನ್ನ ಆಡಳಿತಾವಧಿಯಲ್ಲಿ ಆರಂಭವಾಗಿರುವುದು ಸಂತಸ ತಂದಿದೆ ಎಂದರು.

ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಕ್ಕ ಗ್ರಾಮದಲ್ಲಿ ನೆಲೆಸಿರುವ ನಾಲ್ಕು ದೇವರುಗಳ ಅನುಗ್ರಹದಿಂದ ಗೆಲುವು ಸಾಧಿಸಿದರೂ ನನ್ನ ಮೇಲೆ ಸ್ವಗ್ರಾಮದವರಿಗೇಕೆ ತಾತ್ಸಾರ ಅಸೂಯೆ ಎಂಬುದು ನೋವು ತಂದಿತ್ತು. ಆದರೆ ಇಂದಿನ ಕಾರ್ಯಕ್ರಮಕ್ಕೆ ಅದ್ದೂರಿ ಸ್ವಾಗತದ ಅಭಿಮಾನಕ್ಕೆ ನನ್ನ ನೋವಿಗೆ ತೆರೆ ಬಿದ್ದು ಹರ್ಷ ತಂದಿದೆ. ಗ್ರಾಮಸ್ಥರ ಬೇಡಿಕೆಯಂತೆ ಶಾಲಾ ಕಾಂಪೌಂಡ್, ಪಶು ಆಸ್ಪತ್ರೆ, ಪ್ರೌಢ ಶಾಲೆ, ರಸ್ತೆ ಸೇರಿದಂತೆ ಗ್ರಾಮದ ಸಮಗ್ರ ಅಭಿವೃದ್ದಿಗೆ ಬದ್ದನಾಗಿರುವೆ ತಮ್ಮ ಸಹಕಾರ ಮುಖ್ಯ ಎಂದರು.

**ಕೌಟುಂಬಿಕ ಕಷ್ಟದ ಜೀವನ ಸ್ಮರಿಸಿ ಭಾವುಕರಾದರು :** ಕಡು ಬಡತನದಲ್ಲಿ ಜನಿಸಿ ವಿದ್ಯಾಭ್ಯಾಸ ಮಾಡುವಾಗ ತುತ್ತು ಕೂಳಿಗೂ ಕಷ್ಟ ಪಡುತ್ತಿರುವಾಗ ಗ್ರಾಮದ ಸಹೋದರ ಸಮಾಜದವರಾದ ರಂಗಯ್ಯ, ಇಮ್ಮಡಾಪುರ, ಮನೆತನದವರು, ಚಿಕ್ಕ ವೀರಣ್ಣ, ಕಾಟಪ್ಪ, ಪಾರ್ವತಕ್ಕ, ಗೆಳೆಯ ಪಾಪಲಿಂಗಪ್ಪ ತಾಯಿ, ಪ್ರತಿಯೊಬ್ಬರೂ ಮರುಕದಿಂದ ಅನ್ನವಿಕ್ಕಿದ್ದನ್ನು ನಾನು ಯಾವತ್ತೂ ಮರೆಯುವುದಿಲ್ಲ ಎಂದು ಶಾಸಕರು ಭಾವುಕರಾದರು. ಗ್ರಾಮದಲ್ಲಿ ಯಾದವ ಸಮಾಜದ ಪೋಳಿ ದೇವಸ್ಥಾನವನ್ನು ಸರ್ಕಾರದ ಅನುದಾನ ಹಾಗೂ ವೈಯಕ್ತಿಕ ಸಹಾಯದಿಂದ ಅಭಿವೃದ್ದಿ ಪಡಿಸುವೆ. ಮೂರು ಗ್ರಾಮ ಸಮಿತಿ ರಚಿಸಿ ಧಾರ್ಮಿಕ ಸಭೆ ಆಯೋಜಿಸುವೆ. ವಿಶಿಷ್ಟ ಬುಡಕಟ್ಟು ಸಂಪ್ರದಾಯದಿಂದ ದೈವ ಆರಾಧಿಸಿ ಕೃಪೆಗೆ ಪಾತ್ರರಾಗೋಣ ಎಂದು ಹೇಳಿದರು.

ತಹಶೀಲ್ದಾರ್ ಸಯ್ಯದ್ ಖಲೀಮುಲ್ಲಾ ಮಾತನಾಡಿ, ಪ್ರಸಕ್ತವಾಗಿ ನ್ಯಾಯಬೆಲೆ ಅಂಗಡಿಗೆ ಅನುಮತಿ ದೊರೆಯಲು ಇಲಾಖೆಯಿಂದ ಹಲವು ಮಾನದಂಡಗಳಿವೆ. ಅದರಲ್ಲಿ ಸಂಘ - ಸಂಸ್ಥೆ ಪ್ರತಿನಿಧಿಗಳಿಗೆ, ವಿಕಲಚೇತನರಿಗೆ ಮೊದಲ ಆದ್ಯತೆಯಿದೆ. ಶಾಸಕರ ಸ್ವಗ್ರಾಮದಲ್ಲಿ ವಿಕಲಚೇತನ ವ್ಯಕ್ತಿಗೆ ನ್ಯಾಯಬೆಲೆ ಅಂಗಡಿ ಮಂಜೂರಾಗಿ ಉದ್ಘಾಟನೆಯಾಗಿರುವುದು ಸೌಭಾಗ್ಯವಾಗಿದೆ. ಗ್ರಾಮದಲ್ಲಿ 344 ಪಡಿತರ ಚೀಟಿಯ ಫಲಾನುಭವಿಗಳಿದ್ದು, ಸರ್ಕಾರ ಒದಗಿಸುವ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮಕ್ಕೂ ಮುನ್ನ ಗ್ರಾಮದ ಯಾದವ, ವಾಲ್ಮೀಕಿ, ಹರಿಜನ, ಸಮುದಾಯಗಳ ಹಟ್ಟಿಗಳಲ್ಲಿ ಸಂಚರಿಸಿದ ಮೆರವಣಿಗೆಯಲ್ಲಿ ಶಾಸಕ ಬಿ. ದೇವೇಂದ್ರಪ್ಪ ಅವರಿಗೆ ಗ್ರಾಮದ ಮಹಿಳೆಯರು, ಮಕ್ಕಳು, ಗ್ರಾಮಸ್ಥರಿಂದ ಪುಷ್ಪಾರ್ಚನೆ, ಆರತಿ ಬೆಳಗಿ, ಪಟಾಕಿ ಸಿಡಿಸಿ ಸ್ವಗ್ರಾಮದ ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ಅಧ್ಯಕ್ಷ ಓಮಣ್ಣ, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಗ್ರಾ.ಪಂ. ಉಪಾಧ್ಯಕ್ಷೆ ಸುಧಾಮಣಿ, ಗ್ರಾ.ಪಂ ಸದಸ್ಯ ಮಂಜಣ್ಣ, ಮುಖಂಡರಾದ ಓಮಣ್ಣ, ಕೃಷ್ಣಪ್ಪ, ಎಸ್. ಕಾಟಪ್ಪ, ಮಾರಪ್ಪ, ತಮಲೇಹಳ್ಳಿ ಗುರುಮೂರ್ತಿ, ಪುಟ್ಟಣ್ಣ, ಅಹಮ್ಮದ್ ಅಲಿ, ಪಲ್ಲಾಗಟ್ಟೆ ಶೇಖರಪ್ಪ, ಗೌಸ್ ಪೀರ್, ರಂಗಪ್ಪ,ಪಿಡಿಓ ವಾಸುದೇವ, ಪಾಪಲಿಂಗಪ್ಪ, ಎಇಇ ಚಂದ್ರಶೇಖರ್, ಜಗಳೂರಯ್ಯ, ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಧ್ಯಾತ್ಮದಿಂದ ಆನಂದಮಯ ಜೀವನ ಸಾಧ್ಯ

## ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸತ್ಸಂಗದಲ್ಲಿ ಪ್ರತಿಭಾದೇವಿ ಅಭಿಮತ



ಮಲೇಬೆನ್ನೂರು, ಅ.19- ಅಧ್ಯಾತ್ಮದಿಂದ ಆನಂದ ಅಷ್ಟೇ ಅಲ್ಲ, ಶಾಂತಿ-ನೆಮ್ಮದಿಯಿಂದ ಬದುಕು ಸಾಗಿಸಲು ಸ್ಫೂರ್ತಿ ನೀಡುತ್ತದೆ ಎಂದು ಶಿವಮೊಗ್ಗದ ಶ್ರೀ ನಾಗೇಂದ್ರ ಕುಮಾರ್ (ಅಪ್ಪಾಜಿ) ಅವರ ಮಾನಸ ಪುತ್ರಿ ಹಾಗೂ ಸಂತಾನ ಸರಸ್ವತಿ ಪ್ರತಿಭಾದೇವಿ ಅಭಿಪ್ರಾಯಪಟ್ಟರು.

ಪಟ್ಟಣದ ಹೊರ ವಲಯದಲ್ಲಿರುವ ಶ್ರೀ ಭದ್ರಕಾಳಿ ಸಮೇತ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಹಬ್ಬದ ಪ್ರಯುಕ್ತ ಇಂದು ಹಮ್ಮಿಕೊಂಡಿದ್ದ ವಿಶೇಷ ಸತ್ಸಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸತ್ಸಂಗದಲ್ಲಿ ಭಾಗವಹಿಸುವುದರಿಂದಲೂ ಮನಸ್ಸು ಪರಿವರ್ತನೆ ಆಗುತ್ತದೆ. ಬರೀ ಪೂಜೆ ಮಾಡಿದರೆ ಫಲ ಸಿಗುವುದಿಲ್ಲ. ಭಕ್ತಿ, ಶ್ರದ್ಧೆಯಿಂದ ಧ್ಯಾನ, ಪ್ರಾರ್ಥನೆ, ಸೇವೆ ಮಾಡಿದಾಗ ಮಾತ್ರ ಫಲ ಸಿಗುತ್ತದೆ. ನವರಾತ್ರಿಯ ವೇಳೆ ಜಗನ್ಮಾತೆಯ ಆರಾಧನೆ ಹೆಚ್ಚು ಶ್ರೇಷ್ಠವಾಗಿರುತ್ತದೆ ಎಂದರು.

ಅಪ್ಪ, ಅಮ್ಮ, ಗುರುಗಳ ಬಗ್ಗೆ ಭಕ್ತಿ, ಪ್ರೀತಿಯನ್ನು ಸದಾ ಹೊಂದಿರಬೇಕು. ನಮ್ಮ ಪಾಲಿನ ಅಪ್ಪಾಜಿ ಅವರು ಪ್ರೀತಿ, ಕರುಣೆ ಹೊಂದಿರುವ ಜಗನ್ಮಾತೆಯಾಗಿದ್ದಾರೆ. ಅವರು ಲಲಿತ ಸಹಸ್ರನಾಮವನ್ನು ಭಾವಪೂರ್ಣವಾಗಿ ನಮಗೆಲ್ಲಾ ಹೇಳಿಕೊಡುವ ಮೂಲಕ ನಮ್ಮ ಮನಸ್ಸನ್ನು ಅಧ್ಯಾತ್ಮವಾಗಿ ಪರಿವರ್ತನೆ ಮಾಡಿದ್ದಾರೆಂದು ಪ್ರತಿಭಾದೇವಿ ತಿಳಿಸಿದರು.

ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ. ಪಂಚಪ್ಪ, ಬಿ. ನಾಗೇಶ್, ಬಿ.ವಿ. ರುದ್ರೇಶ್, ಬಿ. ಉಮಾಶಂಕರ್, ಬಿ. ಶಂಭುಲಿಂಗಪ್ಪ, ಬಿ.ಎಂ. ಹರ್ಷ, ಬಿ.ಎನ್. ವೀರೇಶ್, ಬಿ.ಸಿ. ಸತೀಶ್, ಡಾ. ಬಿ. ಚಂದ್ರಶೇಖರ್, ಎಸ್.ಎನ್. ಶಂಭುಲಿಂಗಪ್ಪ, ಎನ್.ಕೆ. ಬಸವರಾಜ್, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶ್, ಪಾಲಿಕೆ ಸದಸ್ಯೆ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನಿ, ದಾವಣಗೆರೆ ಅರ್ಬನ್ ಬ್ಯಾಂಕ್ ನಿವೃತ್ತ ಮ್ಯಾನೇಜರ್ ತಿರುಕಪ್ಪ, ಉಪನ್ಯಾಸಕ ಹೊನ್ನಾಳಿಯ ಹೆಚ್. ಆರ್. ಗಂಗಾಧರ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಅಧ್ಯಕ್ಷರಾಗಿ ಪರಶುರಾಮಪ್ಪ

(1ನೇ ಪುಟದಿಂದ) ಆಗಿದ್ದು, ಪ್ರವೃತ್ತಿಯಲ್ಲಿ ಸಾಮಾಜಿಕ ಸೇವಾ ಕಾರ್ಯಕರ್ತರಾಗಿದ್ದಾರೆ. ಲೋಕಸಭೆ ಮಾಜಿ ಸದಸ್ಯರಾಗಿದ್ದ ಚೆನ್ನಯ್ಯ ಒಡೆಯರ್ ಅವರ ಆಪ್ತ ಒಡನಾಡಿಗಳಲ್ಲೊಬ್ಬರಾಗಿದ್ದರು.


**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ **Rs. 2000/- per sq ft.** ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
**ACHARYA REALTORS**
**826 826 7878**


**JOB OPPORTUNITY**
**Female Office Assistant**
Good In Office Work-Computer Skills Good In Customer Dealing Freshers can also apply **B.Com., M.Com., & MBA**
**For Contact : 97312 18567**
Send C.V-hardsoftdvg@gmail.com

**ಗ್ಯಾಸ್ ಗೀಜರ್**
Fully Automatic 2990.- Rs.
R.O. +uv ವಾಟರ್ ಫಿಲ್ಟರ್, 4990/- ಸೇಲ್ಸ್ ಸರ್ವೀಸ್‌ಗಾಗಿ ಸಂಪರ್ಕಿಸಿ.
**ಮರುತ್ ಎಂಟರ್ ಪ್ರೈಸಸ್**
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
**98868 96574, 98458 67574**

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
**www.hindusmatrimony.com**
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
**94481-59303, 94834 63783**

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
**88616 89590**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
**ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಐ. ದೊಡ್ಡಮನಿ** (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
**M:9740523710**

**ಮೂಲ ಕ್ರಯಪತ್ರ ಕಳೆದಿದೆ**
ಶ್ರೀ ಕೆ.ಸಿ. ಓಂಕಾರಪ್ಪ ಬಿನ್ ಲೇಟ್ ಶ್ರೀ ಕೆ.ಬಿ. ಚನ್ನಬಸಪ್ಪ ಮತ್ತು ಸಹೋದರ, ಸಹೋದರಿಯರು ಆದ ನಾವು ತಿಳಿಸುವುದೇನೆಂದರೆ, ಹರಿಹರ ತಾಲ್ಲೂಕು, ಮಿಟ್ಲಕಟ್ಟೆ ಗ್ರಾಮದ ರಿ.ಸರ್ವೆ ನಂ. 7/24, ವಿಸ್ತೀರ್ಣ 00-22 ಗುಂಟೆ ಜಮೀನನ್ನು ಶ್ರೀಮತಿ ಲೇಟ್ ಗಂಗಮ್ಮ ಯಾನೇ ಶಾಂತಮ್ಮ ಕೋಂ ಲೇಟ್ ಕೆ.ಬಿ. ಚನ್ನಬಸಪ್ಪನವರು ದಿನಾಂಕ 3.11.1978ರಂದು ಶ್ರೀ ಆರ್.ಎಸ್. ಗಣಪತಿ ಬಿನ್ ಶಿವಾನಂದಪ್ಪ ದಾವಣಗೆರೆರವರಿಂದ ರೂ. 3000 ಗಳಿಗೆ ಶುದ್ಧ ನೋಂದಾಯಿತ ಕ್ರಯಪತ್ರ ಸಂಖ್ಯೆ 1076 / 1978-1979ರಂತೆ ಹರಿಹರ ತಾಲ್ಲೂಕು ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿತ ಕ್ರಯಪತ್ರ ಈಗ ನಮ್ಮ ತಾಯಿ ಮತ್ತು ತಂದೆಯವರು ಮೃತರಾದ ನಂತರ ನಮ್ಮಗಳ ಆರ್.ಟಿ.ಸಿಯಂತೆ ಹೆಸರಿಗೆ ಜಂಟಿ ಖಾತೆಯೂ ಸಹ ಆಗಿದ್ದು, ಅದರ ಸಂಬಂಧ ಕೆಲವು ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಿ ನೀಡಲು ಓಡಾಡುವ ಸಂದರ್ಭದಲ್ಲಿ ದಾವಣಗೆರೆ ದೇವರಾಜ ಅರಸ್ ಬಡಾವಣೆಯ, ನ್ಯಾಯಾಲಯದ ಮುಂಭಾಗದಲ್ಲಿರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸುವ ಸಂದರ್ಭದಲ್ಲಿ ಕಳೆದು ಹೋಗಿರುತ್ತದೆ. ಸದರಿ ಮೂಲ ಶುದ್ಧ ಕ್ರಯ ಪತ್ರವು ನಮ್ಮಗಳಿಗೆ ತುಂಬಾ ಅವಶ್ಯಕವಾಗಿದ್ದು, ಸದರಿ ಮೂಲ ಕ್ರಯ ಪತ್ರ ಸಂಖ್ಯೆ 1076/1978-1979 ಪತ್ರ ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಬೇಕೆಂದು ಮನವಿ.
ಶ್ರೀ ಕೆ.ಜಿ. ಓಂಕಾರಪ್ಪ ಬಿನ್ ಲೇಟ್ ಕೆ.ಬಿ. ಚನ್ನಬಸಪ್ಪ ಇಂಜಿನಿಯರ್, ವಾಸ : ಮನೆ ನಂ. 3037/1, 8ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. ಮೊ : 90194 08358


# ಆರ್‌ಆರ್‌ಟಿಎಸ್‌ಗೆ 'ನಮೋಭಾರತ್' ಹೆಸರು

ನವದೆಹಲಿ, ಅ. 19 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೀಜನಲ್ ರ್‍ಯಾಪಿಡ್ ಟ್ರಾನ್ಸಿಟ್ ಸಿಸ್ಟಂ (ಆರ್.ಆರ್.ಟಿ.ಎಸ್.) ರೈಲ್ವೆ ವ್ಯವಸ್ಥೆ ಉದ್ಘಾಟಿಸಿದ್ದಾರೆ. ಇದಕ್ಕೆ 'ನಮೋ ಭಾರತ್' ಎಂಬ ಹೆಸರಿಡಲಾಗಿದೆ. ದೆಹಲಿ - ಘಾಜಿಯಾಬಾದ್ - ಮೀರತ್ ಆರ್.ಆರ್.ಟಿ.ಎಸ್. ಕಾರಿಡಾರ್‌ನ 17 ಕಿ.ಮೀ. ಆದ್ಯತಾ ಮಾರ್ಗ ನಾಡಿದ್ದು ದಿನಾಂಕ 21ರ ಶನಿವಾರದಿಂದ ಕಾರ್ಯನಿರ್ವಹಣೆ ಆರಂಭಿಸಲಿದೆ. ದೆಹಲಿ - ಘಾಜಿಯಾಬಾದ್ - ಮೀರತ್ ಕಾರಿಡಾರ್ ಮಾರ್ಗಕ್ಕೆ ಪ್ರಧಾನಿ ಮೋದಿ ಅವರು ಮಾರ್ಚ್ 8, 2019ರಲ್ಲಿ ಶಿಲಾನ್ಯಾಸ ನೆರವೇರಿಸಿದ್ದರು.ಜನನಿಬಿಡ ಪ್ರದೇಶದಲ್ಲಿ ಹೆಚ್ಚಿನ ವೇಗದ ರೈಲ್ವೆ ವ್ಯವಸ್ಥೆ ಕಲ್ಪಿಸಲು ಆರ್.ಆರ್.ಟಿ.ಎಸ್. ರೂಪಿಸಲಾಗಿದೆ. ಈ ಮಾರ್ಗ 180 ಕಿ.ಮೀ. ವೇಗದ ಸಾಮರ್ಥ್ಯ ಹೊಂದಿದೆ.

# ಹರಿಹರದಲ್ಲಿ ಶ್ರೀ ವಾಲ್ಮೀಕಿ ಪ್ರತಿಮೆ ಸ್ಥಾಪಿಸಲು ಸಮಾಜದ ಮನವಿ



ಹರಿಹರ, ಅ,19- ನಗರದಲ್ಲಿ ಆದಿಕವಿ ಮಹರ್ಷಿ ಶ್ರೀ ವಾಲ್ಮೀಕಿ ಪ್ರತಿಮೆ ಪ್ರತಿಷ್ಠಾಪಿಸುವಂತೆ ತಾಲ್ಲೂಕು ವಾಲ್ಮೀಕಿ ಸಮಾಜದ ವತಿಯಿಂದ ನಗರಸಭೆ ಅಧ್ಯಕ್ಷರಾದ ನಿಂಬಕ್ಕ ಚಂದಾಪೂರ್ ಮತ್ತು ಪೌರಾಯುಕ್ತ ಐಗೂರು ಬಸವರಾಜ್ ಅವರಿಗೆ ಮನವಿ ಅರ್ಪಿಸಲಾಯಿತು.

ಈ ವೇಳೆ ವಾಲ್ಮೀಕಿ ಸಮಾಜದ ನಿಕಟ ಪೂರ್ವ ಅಧ್ಯಕ್ಷ ಕೆ.ಬಿ. ಮಂಜುನಾಥ್ ಹಾಗೂ ಅಧ್ಯಕ್ಷ ಎಂ.ಹೆಚ್. ಬಸವರಾಜ್ ಮಾತನಾಡಿ, ಪ್ರತಿಮೆಯನ್ನು ನಗರದ ಹೊರಭಾಗದ ಎರಡನೇ ರೈಲ್ವೆ ಗೇಟ್ ಬಳಿ ಅಮ್ಯೂಸ್ ಮೆಂಟ್ ಪಾರ್ಕ್ ಮುಂಭಾಗದ ರಸ್ತೆ ಹತ್ತಿರ ಪ್ರತಿಷ್ಠಾಪನೆ ಮಾಡಿ, ತಾಲ್ಲೂಕಿನಲ್ಲಿ ಇರುವ ಮಹರ್ಷಿ ಶ್ರೀ ವಾಲ್ಮೀಕಿ ಗುರುಪೀಠಕ್ಕೆ ಗೌರವ ಸೂಚಿಸಬೇಕು ಎಂದು ಹೇಳಿದರು.

ಈ ವಿಷಯವನ್ನು ನಗರಸಭೆ ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರ ಗಮನಕ್ಕೆ ತರುವ ಮೂಲಕ ಚರ್ಚಿಸಲಾಗುತ್ತದೆ ಎಂದು ಅಧ್ಯಕ್ಷರು ಮತ್ತು ಆಯುಕ್ತರು ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ದಿನೇಶ್ ಬಾಬು, ವಾಲ್ಮೀಕಿ ಸಮಾಜದ ಗೌರವಾಧ್ಯಕ್ಷ ಆರ್. ರಾಜು, ಪಾರ್ವತಿ, ದೇವೇಂದ್ರಪ್ಪ ಹಂಚಿನಮನೆ, ಗಂಗಾಧರ ಮೆಣಸಿನಹಾಳ, ಪರಶುರಾಮ್, ಧನರಾಜ್, ಅಂಜನಮ್ಮ ಗುಂಡಗತ್ತಿ, ಹೊನ್ನಪ್ಪ ಗಂಗನಹರಸಿ, ಮೋಹನ್ ಕುಮಾರ್, ಭರತ್ ಮುದೇನೂರು ಹಾಗು ಇತರರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ

## ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)

ದಾವಣಗೆರೆ - 577 004.



# ಹೃದಯಪೂರ್ವಕ ಅಭಿನಂದನೆಗಳು

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟಿನ ಅಧ್ಯಕ್ಷರಾದ
ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ
ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು
ಕಾರ್ಯದರ್ಶಿಗಳಾದ **ಶ್ರೀ ಎನ್.ಎ. ಮುರುಗೇಶ್**
ಅವರ ಹುಟ್ಟುಹಬ್ಬದ ಪ್ರಯುಕ್ತ, ಶುಭಾಶೀರ್ವಾದಗಳೊಂದಿಗೆ ಆಶೀರ್ವದಿಸಿರುತ್ತಾರೆ.



ಶುಭಾಶಯ ಕೋರುವವರು :

ಅಧ್ಯಕ್ಷರು: **ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು**

**ಶ್ರೀ ಅಥಣಿ ಎಸ್. ವೀರಣ್ಣ,** ಮ್ಯಾನೇಜಿಂಗ್ ಟ್ರಸ್ಟಿ **ಶ್ರೀ ಎಂ.ಹೆಚ್. ನಿಜಾನಂದ,** ಉಪಾಧ್ಯಕ್ಷರು

ಟ್ರಸ್ಟಿಗಳು

- ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
- ಶ್ರೀ ಬಿ.ಸಿ. ಉಮಾಪತಿ
- ಶ್ರೀ ಆರ್. ರಮಾನಂದ
- ಶ್ರೀ ಆರ್. ವೆಂಕಟರೆಡ್ಡಿ
- ಶ್ರೀ ಕೆ.ಜಿ. ಸುಗಂಧರಾಜ್
- ಶ್ರೀ ಬಿ.ಸಿ. ಶಿವಕುಮಾರ್
- ಶ್ರೀ ಎಂ. ಮಹೇಶ್ಚಂದ್ರಬಾಬು
- ಶ್ರೀ ಎಸ್.ಕೆ. ವೀರಣ್ಣ
- ಶ್ರೀ ಐ.ಪಿ. ಏಕೋರಾಮಾರಾಧ್ಯ
- ಶ್ರೀ ಎ.ಕೆ. ಪ್ರಶಾಂತ್
- ಶ್ರೀ ಎಂ.ವಿ. ವೀರೇಂದ್ರ
- ಶ್ರೀ ಎ.ವಿ. ಪ್ರಸಾದ್
- ಡಾ. ಹೆಚ್.ಬಿ. ಮೋಹನ್

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)ನ ಆಶ್ರಯದಲ್ಲಿ ನಡೆಯುವ ಗುಂಡಿ ನರ್ಸರಿ ಶಾಲೆ, ಪಿ.ಎಸ್. ಪ್ರಾಥಮಿಕ ಶಾಲೆ, ಅಥಣಿ ಪ್ರೌಢಶಾಲೆ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕ ವೃಂದ, ಸಿಬ್ಬಂದಿ ವೃಂದ ಹಾಗೂ ವಿದ್ಯಾರ್ಥಿಗಳು-ವಿದ್ಯಾರ್ಥಿನಿಯರು

# ಜನ್ಮದಿನದ ಶುಭಾಶಯಗಳು



ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರೂ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳೂ, ಕಲಾ ಪ್ರಕಾಶ ವೃಂದದ ನಿರ್ದೇಶಕರೂ, ಯುವ ಸಹಕಾರಿ ಧುರೀಣರೂ ಆದ

## ಶ್ರೀ ಎನ್.ಎ. ಮುರುಗೇಶ್

ಇವರಿಗೆ ಜನ್ಮ ದಿನದ ಶುಭಾಶಯಗಳು.

**ಬಿಮಹಾರುದ್ರಪ್ಪ,ಮಲೇಬೆನ್ನೂರು**
ಹೋಟೆಲ್‌ದಿಹರ್ಷ
ಇಂಟರ್‌ನ್ಯಾಷನಲ್,
ಸಾಗರರಸ್ತೆ,ಶಿವಮೊಗ್ಗ.

**ಬಿ.ನಾಗೇಶಪ್ಪ**
ಶ್ರೀಚನ್ನೇಶ್ವರಟ್ರೈಸ್‌ಇಂಡಸ್ಟ್ರೀಸ್,
ಮಲೇಬೆನ್ನೂರು

**ಬಿ.ಉಮಾಶಂಕರ್**
ಶ್ರೀಗಣೇಶಟ್ರೇಡಿಂಗ್‌ಕಂಪನಿ,
ಮಲೇಬೆನ್ನೂರು.

# ಹುಟ್ಟುಹಬ್ಬದ ಶುಭಾಶಯಗಳು




ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ಮಾಜಿ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳು, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳು, ಕಲಾ ಪ್ರಕಾಶ ವೃಂದದ ನಿರ್ದೇಶಕರು ಮತ್ತು ನಮ್ಮ ಸಹಕಾರಿ ಸಂಘದ ನಿರ್ದೇಶಕರಾದ

## ಶ್ರೀಯುತ ಎನ್.ಎ. ಮುರುಗೇಶ್

ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶ್ರೀಯುತರಿಗೆ ಭಗವಂತನು ಇನ್ನೂ ಹೆಚ್ಚಿನ ಆಯುರಾರೋಗ್ಯ ನೀಡಿ ಅವರಿಗೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯವನ್ನು ನೀಡಲಿ ಎಂದು ಶುಭ ಹಾರೈಸುತ್ತೇವೆ.

**ಶ್ರೀಮತಿ ಸವಿತಾ ಮುರುಗೇಶ್**
ಅಧ್ಯಕ್ಷರು

**ಶ್ರೀ ಕುಬೇರಪ್ಪ ಎ.ಹೆಚ್.**
ಉಪಾಧ್ಯಕ್ಷರು

ನಿರ್ದೇಶಕರುಗಳು :

- ಶ್ರೀಮತಿ ಜಯಮ್ಮ ಪರಶುರಾಮಪ್ಪ
- ಶ್ರೀ ವಿಶ್ವನಾಥ್ ಬಿ.ವಿ.
- ಶ್ರೀ ಸಂಗಮೇಶ್ ಡಿ. ಕೆ.
- ಶ್ರೀ ಬಸವರಾಜ್ ಕೆ.ಎಂ.
- ಶ್ರೀ ತಿರುಕಪ್ಪ ಹೆಚ್.
- ಶ್ರೀ ಹಾಲಸ್ವಾಮಿ ಕೆ. ಎಂ.
- ಶ್ರೀ ವೆಂಕಪ್ಪ ಪಿ.ಹೆಚ್.
- ಶ್ರೀ ನಟರಾಜ್ ಸಿ.ಎಲ್.
- ಶ್ರೀ ಹರೀಶ್ ಎಂ.ಎನ್.
- ಶ್ರೀ ಹಾಲಸ್ವಾಮಿ ಎನ್.ಎಂ.
- ಶ್ರೀಮತಿ ಮಮತ ವೈ.ಸಿ.
- ಶ್ರೀಮತಿ ಗೀತಾ ಕೊಟ್ರೇಶ್

ವಿಶೇಷ ಆಹ್ವಾನಿತರು :

- ಶ್ರೀ ಆರ್.ಟಿ. ಮೃತ್ಯುಂಜಯ
- ಶ್ರೀ ಎಂ.ಎಸ್. ರುದ್ರಮುನಿ

ಹಾಗೂ ಸಿಬ್ಬಂದಿ ವರ್ಗದವರು

**ಸಂತೃಪ್ತಿ ಸೌಹಾರ್ದ ಸಹಕಾರ ಸಂಘ ನಿಯಮಿತ, ದಾವಣಗೆರೆ.**


# ಹುಟ್ಟುಹಬ್ಬದ ಶುಭಾಶಯಗಳು

ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರೂ, ದಾವಣಗೆರೆ ಪಟ್ಟಣ ಸಹಕಾರ ಬ್ಯಾಂಕ್‌ಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳೂ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳೂ, ಕಲಾ ಪ್ರಕಾಶ ವೃಂದದ ನಿರ್ದೇಶಕರೂ, ಯುವ ಸಹಕಾರಿ ಧುರೀಣರೂ ಆದ

## ಶ್ರೀಯುತ ಎನ್.ಎ. ಮುರುಗೇಶ್

ಇವರಿಗೆ ಜನ್ಮ ದಿನದ ಶುಭಾಶಯಗಳು.

ಈ ಶುಭ ಸಂದರ್ಭದಲ್ಲಿ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯ, ಭಾಗ್ಯ ನೀಡಿ ಅವರಿಗೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯವನ್ನು ನೀಡಲಿ ಎಂದು ಶುಭ ಹಾರೈಸುತ್ತೇವೆ.



**ಶ್ರೀ ಹೆಚ್. ಮಹಾಲಿಂಗಪ್ಪ,** ಅಧ್ಯಕ್ಷರು, **ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ,** ಟ್ರಸ್ಟಿಗಳು

- **ಎ. ಸತ್ಯನಾರಾಯಣ**
  ಜಮೀನ್ದಾರರು, ಮಲ್ಲನಾಯಕನಹಳ್ಳಿ ಕ್ಯಾಂಪ್
- **ಉಮೇಶ್ ಶೆಟ್ಟಿ**
  ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ.
- **ಟಿ. ಎಂ. ಸೋಮಶೇಖರಯ್ಯ**
  ಹೋಟೆಲ್ ಉದ್ಯಮಿ, ದಾವಣಗೆರೆ.
- **ಸುಬ್ರಮಣ್ಯ ಬಿ.ಕೆ.**
  ಹೋಟೆಲ್ ಉದ್ಯಮಿ, ದಾವಣಗೆರೆ.
- **ಮಹೇಶ್ ಆರ್. ಶೆಟ್ಟಿ**
  ವೈಶಾಲಿ ಬಾರ್ & ರೆಸ್ಟೋರೆಂಟ್, ದಾವಣಗೆರೆ.
- **ಜಿ.ಎಂ. ವಿರೂಪಾಕ್ಷಪ್ಪ**
  ಸಿವಿಲ್ ಇಂಜಿನಿಯರ್, ದಾವಣಗೆರೆ.
- **ಬಿ.ಡಿ. ಗೌಡ್ರು**
  ನಿವೃತ್ತ ಹಿರಿಯ ಮಹಾಪ್ರಬಂಧಕರು, ಕೆನರಾ ಬ್ಯಾಂಕ್
- **ಎಲ್.ಆರ್. ಸಿದ್ದರಾಮಪ್ಪ**
  ನಿವೃತ್ತ ಇಂಜಿನಿಯರ್, ದಾವಣಗೆರೆ.
- **ಉಮಾಪತಯ್ಯ**
  ಚಾರ್ಟರ್ಡ್ ಅಕೌಂಟೆಂಟ್, ದಾವಣಗೆರೆ.
- **ಬಿ.ಜಿ. ಪ್ರಸಾದ್**
  ಉದ್ಯಮಿ, ದಾವಣಗೆರೆ.
- **ಹರೀಶ್,** ಮಾಲೀಕರು
  ವಿನಾಯಕ ಮೋಟಾರ್ಸ್, ದಾವಣಗೆರೆ.
- **ಕಂಬಳಿ ಹಾಲಸ್ವಾಮಿ**
  ಉದ್ಯಮಿ, ದಾವಣಗೆರೆ.
- **ಮಲ್ಲಿಕಾರ್ಜುನ್**
  ಆಟೋ ಕನ್ಸಲ್ಟೆಂಟ್, ದಾವಣಗೆರೆ.
- **ಮಹಾದೇವಭಟ್**
  ಎಜುಕೇಷನಿಸ್ಟ್, ಶಿರಸಿ.

**ಆಡಳಿತ ಮಂಡಳಿ, ಆಡಳಿತಾಧಿಕಾರಿಗಳು, ಪ್ರಾಂಶುಪಾಲರು, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ**

## ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಸಿ.ಬಿ.ಎಸ್.ಇ. / ಐ.ಸಿ.ಎಸ್.ಇ. ವಸತಿ ಶಾಲೆ ಮತ್ತು ಪಿ.ಯು. ವಿಜ್ಞಾನ ಕಾಲೇಜು

ನಂ. 5335, 1ನೇ ಮುಖ್ಯರಸ್ತೆ, BIET ಕಾಲೇಜು ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆ, ದಾವಣಗೆರೆ-04., ಫೋ: (08192) 263766, 264696, 264990

# ವಿವಿಧೆಡೆಗಳಲ್ಲಿ ನವರಾತ್ರಿ ಐದನೇ ದಿನದ ವಿಶೇಷಾಲಂಕಾರಗಳಲ್ಲಿ ಶಕ್ತಿದೇವತೆಯರು



ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾಂಬ ವಿಶ್ವಕರ್ಮ ದೇವಸ್ಥಾನದಲ್ಲಿ ಶ್ರೀ ಕಾಳಿಕಾ ಮಾತೆಗೆ ಸ್ಕಂದಮಾತಾ ಅಲಂಕಾರ



ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ಗರುಡ ವಾಹನ ಅಲಂಕಾರ



ನಿಟ್ಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದಲ್ಲಿ ದೇವಿಗೆ ಸ್ಕಂದಮಾತಾ ಅಲಂಕಾರ



ಜಯದೇವ ಸರ್ಕಲ್‌ನ ಕೂಡಲಿ ಮಠದಲ್ಲಿ ಶ್ರೀದೇವಿಗೆ ಮುತ್ತಿನ ಅಲಂಕಾರ



ಹಳೆ ಬೇತೂರು ರಸ್ತೆ ಬನಶಂಕರಿ ದೇವಸ್ಥಾನದಲ್ಲಿ ಶ್ರೀ ಗಾಯಿತ್ರಿದೇವಿ ಅಲಂಕಾರ



ದೇವರಾಜ ಅರಸು ಬಡಾವಣೆ ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ಮುತ್ತಿನ ಅಲಂಕಾರ



ರಿಂಗ್ ರಸ್ತೆ ಶಾರದಾಂಬ ದೇವಸ್ಥಾನದಲ್ಲಿ ದೇವಿಗೆ ಗರುಡ ವಾಹನ ಅಲಂಕಾರ



ದೇವಾಂಗಪೇಟೆಯ ಶ್ರೀ ಬನಶಂಕರಿ ದೇವಿಗೆ ನವಧಾನ್ಯ ಅಲಂಕಾರ



ಕೆಟಿಜೆ ನಗರದ ಶ್ರೀ ತುಳುಜಾ ಭವಾನಿ ದೇವಸ್ಥಾನದಲ್ಲಿ ಅಮ್ಮನವರಿಗೆ ವಿಶೇಷಾಲಂಕಾರ



ವಿದ್ಯಾನಗರ ಶಿವ ಪಾರ್ವತಿ ದೇವಸ್ಥಾನದಲ್ಲಿ ಇಂದಿನ ಅಲಂಕಾರ



ಶಾಮನೂರಿನ ಶ್ರೀ ಮಂಗಳಗೌರಮ್ಮ ದೇವಸ್ಥಾನದಲ್ಲಿ ಸ್ಕಂದಮಾತ ದೇವಿ ಅಲಂಕಾರ



ದಾವಲ್‌ಪೇಟೆಯ ಶ್ರೀ ಚೌಡೇಶ್ವರಿ ದೇವಿಗೆ ಸಂತಾನ ಲಕ್ಷ್ಮಿ ಅಲಂಕಾರ



ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಹೊರನಾಡು ಅನ್ನಪೂರ್ಣೇಶ್ವರಿ ಅಲಂಕಾರ



ಜಾಲಿನಗರ ಶ್ರೀ ರೇಣುಕಾಯಲ್ಲಮ್ಮ ದೇವಿ ದೇವಸ್ಥಾನದಲ್ಲಿ ವಿಶೇಷಾಲಂಕಾರ



ಪಿ.ಬಿ ರಸ್ತೆಯ ಪಂಚದೇವಸ್ಥಾನಗಳ ಮಹಾ ಕ್ಷೇತ್ರದಲ್ಲಿ ದೇವಿಯ ವಿಶೇಷ ಅಲಂಕಾರ



ನಿಟ್ಟುವಳ್ಳಿ ಬಸವೇಶ್ವರ ಬಡಾವಣೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ದೇವಿಗೆ ಸ್ಕಂದ ಮಾತಾ ಅಲಂಕಾರ



ಚಿಕ್ಕಮ್ಮಣ್ಣಿ ದೇವರಾಜ್ ಅರಸ್ ಬಡಾವಣೆ ನಾಲ್ಕನೇ ದಿನದ ವಿಶೇಷಾಲಂಕಾರ



ಡಿಸಿಎಂ ಟೌನ್‌ಶಿಪ್ ಶ್ರೀ ವಾಸವಿ ದೇವಸ್ಥಾನದಲ್ಲಿ ಶ್ರೀ ಅಮ್ಮನವರಿಗೆ ಧನಲಕ್ಷ್ಮೀ ಅಲಂಕಾರ



ಗಾಂಧಿನಗರ ಶ್ರೀ ಹೊರಟ್ಟಿ ದುರ್ಗಾಂಬಿಕಾ ದೇವಿ ಹಾಗೂ ಮರಿಯಮ್ಮ ದೇವಿಗೆ ಶ್ರೀ ಸ್ಕಂದಮಾತಾ ಅಲಂಕಾರ



ಎಸ್‌ಓಜಿ ಕಾಲೋನಿ ಶ್ರೀ ಶನೈಶ್ಚರ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ಚೌಡೇಶ್ವರಿಗೆ ಭಸ್ಮ ಅಲಂಕಾರ



ಉಚ್ಚಂಗಿದುರ್ಗದ ಶ್ರೀ ಉಚ್ಚಂಗೆಮ್ಮ ದೇವಿಗೆ ತೆಂಗಿನಕಾಯಿ ಅಲಂಕಾರ



ಹರಿಹರ ಕಸಬಾ ಊರಮ್ಮ ದೇವಿಗೆ ಶ್ರೀ ಕೊಲ್ಹಾಪುರ ಮಹಾಲಕ್ಷ್ಮಿ ದೇವಿ ಅಲಂಕಾರ



ಹರಿಹರ ಮಹಜೇನಹಳ್ಳಿ ಗ್ರಾಮದೇವತೆ ಊರಮ್ಮ ದೇವಿಗೆ ಊರಮ್ಮ ದೇವಿ ಅಲಂಕಾರ



ಹರಿಹರ ಹೊಸ ಭರಂಪುರದ ಶ್ರೀ ಊರಮ್ಮದೇವಿಗೆ ಹುಲಿಗೆಮ್ಮ ದೇವಿ ಅಲಂಕಾರ



ಹರಿಹರ ಹಳ್ಳದಕೇರಿ ಬಡಾವಣೆ ಏಕನಾಥೇಶ್ವರಿ ದೇವಿಗೆ ತುಳಜಾಭವಾನಿ ಅಲಂಕಾರ



ಉಚ್ಚಂಗಿದುರ್ಗದ ಶ್ರೀ ಹಾಲಮ್ಮ ದೇವಿಗೆ ತರಕಾರಿಗಳ ವಿಶೇಷ ಅಲಂಕಾರ



ಮಲೇಬೆನ್ನೂರು ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ಭದ್ರಕಾಳಿ ದೇವಿಗೆ ಸ್ಕಂದ ಮಾತಾ ಅಲಂಕಾರ

# ಪಾಕ್ ಜೊತೆ ಮಾತುಕತೆ ನಿಲ್ಲಿಸಿದ ಅಮೆರಿಕ

ಇಸ್ಲಾಮಾಬಾದ್, ಅ. 19 – ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರು ಅಮೆರಿಕದ ಜೊತೆಗಿನ ಮಾತುಕತೆ ಬಹಿರಂಗ ಪಡಿಸಿದ ನಂತರ, ಅಮೆರಿಕದ ಅಧಿಕಾರಿಗಳು ಪಾಕಿಸ್ತಾನದ ಜೊತೆ ಮುಕ್ತ ಮಾತುಕತೆ ನಡೆಸುವುದನ್ನು ನಿಲ್ಲಿಸಿದ್ದಾರೆ ಎಂದು ಪಾಕ್‌ನ ಹಿರಿಯ ರಾಯಭಾರಿಯೊಬ್ಬರು ಹೇಳಿದ್ದಾರೆ.

ಇಮ್ರಾನ್ ಖಾನ್ ಹೇಳಿಕೆಗಳು ಉಭಯ ದೇಶಗಳ ನಡುವೆ ಸೂಕ್ಷ್ಮ ವಿಷಯವಾಗಿ ಪರಿಣಮಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ ಫೈಸಲ್ ತಿರ್ಮಿಜಿ ಹೇಳಿದ್ದಾರೆ. 2022ರ ಮಾರ್ಚ್‌ನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್, ಅಮೆರಿಕ ತಮ್ಮ ಪದಚ್ಯುತಿ ಬಯಸಿದೆ. ಇದಕ್ಕಾಗಿ ಅಮೆರಿಕ ಪತ್ರವೊಂದನ್ನು ಬರೆದಿದೆ ಎಂದು ಹೇಳಿದ್ದರು. ಸಮಾವೇಶದಲ್ಲಿ ಅವರು ಪತ್ರವೊಂದನ್ನೂ ಪ್ರದರ್ಶಿಸಿದ್ದರು.

ಆರೋಪವನ್ನು ತಳ್ಳಿ ಹಾಕಿದ್ದ ಅಮೆರಿಕ, ಖಾನ್ ತೋರಿಸಿದ ಪತ್ರದ ಲಿಖಿತ ವಿವರಗಳನ್ನು ಕೇಳಿತ್ತು ಎಂದು ತಿರ್ಮಿಜಿ ಹೇಳಿದ್ದಾರೆ. ನಂತರದಲ್ಲಿ ಅಮೆರಿಕ ನಮ್ಮ ಜೊತೆ ಸಂಪರ್ಕವನ್ನು ನಿಲ್ಲಿಸಿದೆ. ಗೌಪ್ಯ ಸಂಭಾಷಣೆಗಳನ್ನು ಬಹಿರಂಗ ಪಡಿಸುವುದಾದರೆ, ಮುಕ್ತವಾಗಿ ಮಾತನಾಡುವುದಿಲ್ಲ ಎಂದು ಅಮೆರಿಕದ ಅಧಿಕಾರಿಗಳು ಹೇಳಿದ್ದಾರೆ ಎಂದು ತಿರ್ಮಿಜಿ ತಿಳಿಸಿದ್ದಾರೆ. ತಿರ್ಮಿಜಿ ಈಗ ಯು.ಎ.ಇ. ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

# ಭಾರತದ ಯು.ಪಿ.ಐ. ಮುಂಚೂಣಿಯಲ್ಲಿ ಕಾರ್ಯನಿರ್ವಹಣೆ : ಅಮೆರಿಕದ ಅಧಿಕಾರಿ

ವಾಷಿಂಗ್ಟನ್, ಅ. 19 – ಗಡಿಯಾಚೆಗೆ ಹಣ ಪಾವತಿ ಮಾಡುವಲ್ಲಿ ಭಾರತದ ಯು.ಪಿ.ಐ. ವ್ಯವಸ್ಥೆ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಅಮೆರಿಕದ ಅಂತರರಾಷ್ಟ್ರೀಯ ವ್ಯವಹಾರಗಳ ಖಜಾನೆ ಅಧೀನ ಕಾರ್ಯದರ್ಶಿ ಜಯ್ ಶಾಂಬಾಗ್ ಹೇಳಿದ್ದಾರೆ.

ಹಾರ್ವರ್ಡ್ ಲಾ ಸ್ಕೂಲ್‌ನಲ್ಲಿ ಮಾತನಾಡಿದ ಅವರು, ಭಾರತದ ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯು.ಪಿ.ಐ.) ಇತರೆ ದೇಶಗಳ ಜೊತೆ ದ್ವಿಪಕ್ಷೀಯ ಸಂಬಂಧ ಹೊಂದುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದಿದ್ದಾರೆ.

ವೇಗದ ಪಾವತಿ ವ್ಯವಸ್ಥೆಗಳನ್ನು ಜೋಡಿಸುವಲ್ಲಿ ದ್ವಿಪಕ್ಷೀಯ ಆರ್ಥಿಕ ಸಂಬಂಧಗಳು ಮುಂದುವರೆಯುತ್ತಿವೆ. ಈ ದಿಸೆಯಲ್ಲಿ ಭಾರತದ ಯು.ಪಿ.ಐ. ಸಹ ಮುಂಚೂಣಿಯಲ್ಲಿದೆ. ಸಿಂಗಪುರ ಹಾಗೂ ಯು.ಎ.ಇ. ಜೊತೆ ಯುಪಿಐ ಮೂಲಕ ಪಾವತಿ ಮಾಡಲಾಗುತ್ತಿದೆ ಎಂದವರು ಹೇಳಿದ್ದಾರೆ.

# ಗಾಜಾ ನೆರವಿಗಾಗಿ ಇಸ್ರೇಲ್ ಅನುಮತಿ

ಜೆರುಸಲೇಂ, ಅ. 19 – ಗಾಜಾ ಪಟ್ಟಿಗೆ ಸೀಮಿತವಾಗಿ ಮಾನವೀಯ ನೆರವು ನೀಡಲು ಈಜಿಪ್ಟ್‌ಗೆ ಇಸ್ರೇಲ್ ಸಮ್ಮತಿಸಿದೆ.

ದಶಲಕ್ಷಕ್ಕೂ ಹೆಚ್ಚು ಜನರು ಗಾಜಾದ ಉತ್ತರದಿಂದ ದಕ್ಷಿಣಕ್ಕೆ ತೆರಳಿದ್ದಾರೆ.

ಈ ಹಿನ್ನೆಲೆಯಲ್ಲಿ ಮಾನವೀಯ ನೆರವು ಅಗತ್ಯವಾಗಿದೆ.

# ರಾಜ್ಯ ಜೆಡಿಎಸ್ ಘಟಕ ವಿಸರ್ಜನೆ, ಹಂಗಾಮಿ ರಾಜ್ಯಾಧ್ಯಕ್ಷರಾಗಿ ಹೆಚ್ಡಿಕೆ

ಬೆಂಗಳೂರು, ಅ.19 – ಜೆ.ಡಿ.ಎಸ್. ಪಕ್ಷದಿಂದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರನ್ನು ಉಚ್ಚಾಟನೆ ಮಾಡಲಾಗಿದೆ ಮತ್ತು ರಾಜ್ಯ ಘಟಕವನ್ನು ವಿಸರ್ಜನೆ ಮಾಡಲಾಗಿದೆ.

ಅಲ್ಲದೆ, ಹಂಗಾಮಿ ರಾಜ್ಯಾಧ್ಯಕ್ಷರಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

ಜೆಡಿಎಸ್ ವರಿಷ್ಠ ಹಾಗೂ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವ ದಲ್ಲಿ ಜೆ.ಪಿ. ಭವನದಲ್ಲಿ ನಡೆದ ಎಲ್ಲಾ ಜಿಲ್ಲಾಧ್ಯಕ್ಷರು, ಶಾಸಕರು, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರು, ಸದಸ್ಯರನ್ನು ಒಳಗೊಂಡ ಸಭೆಯಲ್ಲಿ ಮಹತ್ವದ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.



ಕಳೆದ ವಿಧಾನಸಭೆ ಚುನಾವಣೆ ಮುಗಿದ ಮೇಲೆ ಸ್ಥಗಿತಗೊಂಡಿದ್ದ ಪಕ್ಷದ ಚಟುವಟಿಕೆ ಗಳಿಗೆ ವೇಗ ನೀಡುವ ಉದ್ದೇಶದಿಂದ ಹೆಚ್.ಡಿ.ದೇವೇಗೌಡರು ರಾಜ್ಯದ ಜೆಡಿಎಸ್ ಘಟಕದ ಕಾರ್ಯಕಾರಿ ಸಮಿತಿಯನ್ನು ವಿಸರ್ಜಿಸಿ ಆದೇಶ ಹೊರಡಿಸಿದ್ದಾರೆ.

ಜನತಾದಳ (ಜಾತ್ಯತೀತ) ಪಕ್ಷದ ಸಂವಿಧಾನ ಮತ್ತು

### ಸಿ.ಎಂ. ಇಬ್ರಾಹಿಂ ಉಚ್ಚಾಟನೆ

ನಿಯಮಗಳ ಅಡಿಯಲ್ಲಿ ಅಂದರೆ, ಆರ್ಟಿಕಲ್ 10ರ ಪ್ರಕಾರ, ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ಪಕ್ಷದ ರಾಜ್ಯಾಧ್ಯಕ್ಷರು ಮತ್ತು ರಾಜ್ಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ಒಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಆ ಸಮಿತಿಯನ್ನು ವಿಸರ್ಜನೆ ಮಾಡಲಾಗಿದೆ ಎಂದು ದೇವೇಗೌಡರು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಿದರು.

ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ) ಪಕ್ಷದ ರಾಜ್ಯಾಧ್ಯಕ್ಷರು ಮತ್ತು ರಾಜ್ಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿ ಗಳನ್ನು ಒಳಗೊಂಡಂತೆ ಆ ಸಮಿತಿಯನ್ನು ಈಗಾಗಲೇ ವಿಸರ್ಜನೆ ಮಾಡಲಾಗಿದೆ. ಚುನಾವಣೆ ಮುಗಿದು ನಾಲ್ಕು ತಿಂಗಳು ಆಯಿತು. ಇಲ್ಲಿ ಸಿ.ಎಂ ಇಬ್ರಾಹಿಂ ಅವರು ನೀಡಿರುವ ಹೇಳಿಕೆಗಳ ಬಗ್ಗೆ ಪ್ರಸ್ತಾಪ ಮಾಡಲ್ಲ. ಆದರೆ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹಾಗೂ ಇತರೆ ಮುಖಂಡರ ಜತೆಗೆ ಸಮಾಲೋಚನೆ ಮಾಡಿದ್ದೇವೆ ಎಂದು ಗೌಡರು ಹೇಳಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಕಾರ್ಯದರ್ಶಿಯಾಗಿ ವಿಧಾನ ಪರಿಷತ್ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಕಾರ್ಯ ನಿರ್ವಹಿಸಲಿದ್ದಾರೆ. ಪಕ್ಷದ ಮುಖಂಡರೊಂದಿಗೆ ಸಮಾಲೋಚಿಸಿ ಮೂರು ದಿನಗಳಲ್ಲಿ ಕೆಲವು ಪದಾಧಿಕಾರಿಗಳನ್ನು ನೇಮಕ ಮಾಡಲಾಗುವುದು ಎಂದವರು ತಿಳಿಸಿದರು.

# ಡೀಮ್ಡ್‌ನಿಂದ ಎಸ್ಸೆಸ್‌ಗೆ ಡಾಕ್ಟರೇಟ್

(1ನೇ ಪುಟದಿಂದ) ಘಟಿಕೋತ್ಸವ ಕಾರ್ಯಕ್ರಮದಲ್ಲಿ ಎಸ್ಸೆಸ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತದೆ.

ಬಿಎಲ್‌ಡಿಇ ಕುಲಾಧಿಪತಿಗಳೂ ಆಗಿರುವ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಆಯೋಜನೆಗೊಂಡಿರುವ ಈ ಸಮಾರಂಭದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳೂ ಆಗಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಆರ್. ಪಾಟೀಲ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆರ್.ಎಸ್. ಮುಧೋಳ, ಸಮಕುಲಾಧಿಪತಿಗಳಾದ ಪ್ರೊ. ವೈ.ಎಂ. ಜಯರಾಜ್, ಪ್ರೊ. ಅರುಣ್ ಸಿ. ಇನಾಮದಾರ ಉಪಸ್ಥಿತರಿರುವರು.

**ಎಸ್ಸೆಸ್‌ಗೆ 2ನೇ ಡಾಕ್ಟರೇಟ್ :** ಶಾಮನೂರು ಶಿವಶಂಕರಪ್ಪ ಅವರು ಸಾಮಾಜಿಕ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನನ್ಯ ಸೇವೆಯನ್ನು ಗುರುತಿಸಿ ಕಳೆದ 15 ವರ್ಷಗಳ ಹಿಂದೆ ಕುವೆಂಪು ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಇದೀಗ ಡೀಮ್ಡ್ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡುತ್ತಿದೆ.

# ಅಕ್ರಮ ಆಸ್ತಿ ಪ್ರಕರಣ: ಡಿಕೆಶಿ ವಿರುದ್ಧ ಎಫ್‌ಐಆರ್‌ಗೆ ಹೈ ಕೋರ್ಟ್ ಅಸ್ತು

ಬೆಂಗಳೂರು, ಅ. 19 – ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿ.ಬಿ.ಐ. ದಾಖಲಿಸಿರುವ ಎಫ್.ಐ.ಆರ್. ವಿರುದ್ಧ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಾಖಲಿಸಿದ ಅರ್ಜಿಯನ್ನು ಹೈಕೋರ್ಟ್ ತಳ್ಳಿ ಹಾಕಿದೆ.



**ಮೂರು ತಿಂಗಳಲ್ಲಿ ವರದಿ ದಾಖಲಿಸಲು ಸೂಚನೆ**

ಮೂರು ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸಿ ವರದಿ ದಾಖಲಿಸುವಂತೆ ಸಿ.ಬಿ.ಐ.ಗೆ. ನ್ಯಾಯಮೂರ್ತಿ ಕೆ. ನಟರಾಜನ್ ಅವರು ತಿಳಿಸಿದ್ದಾರೆ.

ಸಿ.ಬಿ.ಐ. ಈಗಾಗಲೇ ಬಹುತೇಕ ತನಿಖೆ ಯನ್ನು ಪೂರ್ಣಗೊಳಿಸಿದೆ. ಈ ಹಂತದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ನ್ಯಾಯಮೂರ್ತಿ ನಟರಾಜನ್ ಹೇಳಿದ್ದಾರೆ.

ಆರೋಪಿಗಳ ಹೇಳಿಕೆಯನ್ನು ದಾಖಲಿಸಿ ಕೊಂಡಿರುವ ಸಿ.ಬಿ.ಐ. ಈಗ ಆರೋಪ ಪಟ್ಟಿ ದಾಖಲಿಸುವ ಹಂತದಲ್ಲಿದೆ ಎಂದು ನ್ಯಾಯಾಲಯ ಹೇಳಿದೆ.

2013-2018ರ ನಡುವೆ ಹಿಂದಿನ ಸರ್ಕಾರ ದಲ್ಲಿ ಸಚಿವರಾಗಿದ್ದ ಶಿವಕುಮಾರ್, ಅಕ್ರಮ ಆಸ್ತಿ ಗಳಿಸಿದ್ದಾರೆ ಎಂದು ಸಿ.ಬಿ.ಐ. ಆರೋಪಿಸಿತ್ತು. ಈ ಬಗ್ಗೆ ಸೆಪ್ಟೆಂಬರ್ 3, 2020ರಂದು ಎಫ್.ಐ.ಆರ್. ದಾಖಲಿಸಿತ್ತು. ಈ ಎಫ್.ಐ.ಆರ್. ಪ್ರಶ್ನಿಸಿ 2021ರಲ್ಲಿ ಶಿವಕುಮಾರ್ ಅರ್ಜಿ ದಾಖಲಿಸಿದ್ದರು.

ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿ ದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ನೆಲದ ಕಾನೂನನ್ನು ಗೌರವಿಸುತ್ತೇನೆ. ಏನೂ ತಪ್ಪು ಮಾಡಿಲ್ಲ ಎಂಬುದು ನನಗೆ ತಿಳಿದಿದೆ. ನಾನು ಶುದ್ಧವಾಗಿದ್ದೇನೆ.

ಬಿಜೆಪಿಯು ಸೇಡಿನ ರಾಜಕಾರಣ ಮಾಡುತ್ತಿದೆ. ಆದ್ದರಿಂದಲೇ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿತ್ತು. ಈಗಾಗಲೇ ಶೇ.90ರಷ್ಟು ತನಿಖೆ ಪೂರ್ಣಗೊಂಡಿದೆ. ಯಾವ ಹಂತದಲ್ಲೂ ವಿಚಾರಣೆಗೆ ಒಳಪಡಿಸಿಲ್ಲ. ನನ್ನ ಮತ್ತು ನನ್ನ ಪತ್ನಿಗೆ ಸೇರಿದ ಆಸ್ತಿ ಬಗ್ಗೆ ವಿಚಾರಣೆ ನಡೆಯಬೇಕಿದೆ ಎಂದವರು ಹೇಳಿದ್ದಾರೆ.

ನಾನು ಕಾನೂನು ಚೌಕಟ್ಟಿನಲ್ಲಿ ಹೋರಾಟ ಮುಂದುವರೆಸುತ್ತೇನೆ. ಬಿಜೆಪಿಯ ಪಿತೂರಿ ಏನೇ ಇರಲಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಒದಗಿಸುವುದಾಗಿ ಹೇಳಿದ್ದಾರೆ.

# ವಿದ್ಯಾನಗರದಲ್ಲಿ ಇಂದು 'ಶಿವ ಸಂಕಲ್ಪ' ಭವನ ಉದ್ಘಾಟನೆ

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆಯ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 'ಶಿವ ಸಂಕಲ್ಪ' ಭವನದ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಪರಮಾತ್ಮನ ಸಂದೇಶ ಇನ್ನೂ ಹೆಚ್ಚಿನ ಜನರಿಗೆ ತಲುಪುವಂತಾಗಲು ಅನುಕೂಲವಾಗಲಿ ಎಂಬ ಸಂಕಲ್ಪ ಮಾಡಿದ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲೊಬ್ಬರಾದ ದಾವಣಗೆರೆ - ಶಾಮನೂರಿನ ಶ್ರೀಮತಿ ಲಕ್ಕಮ್ಮ ದ್ಯಾಮಪ್ಪ ಅವರು ವಿದ್ಯಾನಗರದ ನೂತನ - ದವನ್ ಕಾಲೇಜು ಹಿಂಭಾಗದಲ್ಲಿ ತಮ್ಮ 55x58 ಅಳತೆಯ ನಿವೇಶನವನ್ನು ಬ್ರಹ್ಮಾಕುಮಾರಿ ಸಂಸ್ಥೆಗೆ ದಾನ ಮಾಡಿದ್ದರು. ಆ ನಿವೇಶನದಲ್ಲೀಗ ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ದಾನಿಗಳ ಸಹಕಾರದಿಂದ ಸುಮಾರು 2 ಕೋಟಿ ರೂ.ಗಳ ವೆಚ್ಚದಲ್ಲಿ 'ಶಿವ ಸಂಕಲ್ಪ' ಭವನ ನಿರ್ಮಾಣಗೊಂಡಿದೆ.



ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕರಾದ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಜ್ಯೋತಿ ಬೆಳಗಿಸುವರು. ಬ್ರಹ್ಮಾಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜಿ ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ. ಹಿಟ್ನಾಳ್, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಈಶ್ವರೀಯ ವಿಶ್ವವಿದ್ಯಾಲಯದ ಹಾವೇರಿ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಗೌರವಾನ್ವಿತ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಈಶ್ವರೀಯ ವಿಶ್ವವಿದ್ಯಾಲಯದ ಶಿರಸಿ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ವೀಣಾಜೀ ಮತ್ತು ದಾವಣಗೆರೆ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದಾರೆ.

ಈಶ್ವರೀಯ ವಿಶ್ವವಿದ್ಯಾಲಯದ ವಿದ್ಯಾನಗರ ಶಾಖೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜೀ ಈ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ.

## ನಗರದಲ್ಲಿ ಇಂದು 'ಪಾಕ ಪರಿಷೆ'

ದಾವಣಗೆರೆ, ಅ.19- ನಗರದ ಚಾಣುಕ್ಯ ಪದವಿ ಹಾಗೂ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಾಳೆ ದಿನಾಂಕ 20 ರಂದು ಮಧ್ಯಾಹ್ನ 12 ರಿಂದ ಸಂಜೆ 5 ರವರೆಗೆ 'ಚಾಣುಕ್ಯ ಪಾಕ ಪರಿಷೆ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾಲೇಜಿನ ಯೋಜನಾ ಸಂಘಟಕರಾದ ಕೆ.ಪಿ ಕವನ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಸ್.ಎಸ್.ಕೇರ್ ಟ್ರಸ್ಟ್ ಲೈಫ್ ಟ್ರಸ್ಟೀ ಡಾ. ಪ್ರಭಾ ಮಲ್ಲಿಕಾರ್ಜುನ್, ಎಸ್ಪಿ ಉಮಾ ಪ್ರಶಾಂತ್ ಚಾಣುಕ್ಯ ಪರಿಷೆಗೆ ಚಾಲನೆ ನೀಡಲಿದ್ದಾರೆ. ಚಾಣುಕ್ಯ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಡಿ.ವಿ. ನಾಗರಾಜ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕುಲಸಚಿವ ಡಾ. ಕೆ. ಶಿವಶಂಕರ್, ಬೆಂಗಳೂರು ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ, ನಿರ್ದೇಶಕ ಜಿ.ಬಿ. ವಿನಯ್ ಕುಮಾರ್, ಕಾಲೇಜಿನ ಪ್ರಾಚಾರ್ಯ ಕೆ.ರಾಜಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಕೆ. ರಾಜಶೇಖರ್, ಡೀನ್ ಬಿ.ಆರ್. ಟಿ. ಸ್ವಾಮಿ, ಬಿ.ಎಸ್. ಅಮರೇಶ್, ಕೆ.ಪಿ. ಅಶ್ವಿನಿ, ಬಿ.ವಿ. ಶ್ರೀನಾಥ್, ಲಕ್ಷ್ಮೀ, ಸಿಂಚನ, ಜಾಫರ್ ಅಲಿ, ವಿಶ್ವಾಸ್, ನಂದಿತಾ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಪಂಚಮಸಾಲಿ ಪೀಠದಲ್ಲಿ ಇಂದು ನವರಾತ್ರಿಯ ವಿಶೇಷ ಪೂಜೆ

ನವರಾತ್ರಿ ಒಂಬತ್ತು ದಿನಗಳ ಘಟ ಸ್ಥಾಪನೆ ಅಂಗವಾಗಿ ಇಂದು ಬೆಳಿಗ್ಗೆ 11 ಗಂಟೆಗೆ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ನವದುರ್ಗೆಯರ ಒಂದು ದಿನದ ವಿಶೇಷ ಪೂಜೆ ನಡೆಯಲಿದೆ. ಶ್ರೀ ವಚನಾನಂದ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು.

## ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಅಭಿಷೇಕ

ದಾವಣಗೆರೆ, ಅ.19- ನಗರದ ಎಸ್‌ಕೆಪಿ ರಸ್ತೆಯಲ್ಲಿರುವ ಮಾರ್ಕಂಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇದೇ 24ರವರೆಗೆ ಸ್ವಾಮಿಗೆ ಪ್ರತಿ ದಿನ ಬೆಳಿಗ್ಗೆ 7.30ರಿಂದ 9 ರವರೆಗೆ ಅಭಿಷೇಕ ಮತ್ತು ಮಹಾಪೂಜೆ ಇರುತ್ತದೆ ಎಂದು ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷ ಪಿ.ಜೆ.ನಾಗರಾಜ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಸ್ಪರ್ಶ್ ಫೌಂಡೇಶನ್‌ನಿಂದ ಸ್ಪರ್ಶ ವಚನ ಉಪಕ್ರಮದ ಭಾಗವಾಗಿ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವು ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರ ವರೆಗೆ ಮೋದಿ ಕಾಂಪೌಂಡ್ ನಲ್ಲಿರುವ ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್‌ನಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಮೊ: 96869 29090, 99800 33277.

## ಕನಕ ಜಯಂತಿ : ನಗರದಲ್ಲಿ ಇಂದು ಸಭೆ

ಶ್ರೀ ಕನಕದಾಸರ ಜಯಂತ್ಯುತ್ಸವದ ಅಂಗವಾಗಿ ಇಂದು ಸಂಜೆ 5 ಗಂಟೆಗೆ ಪಿ.ಬಿ. ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

## ಮಾಗನೂರು ಬಸಪ್ಪನವರ ನೂತನ ಕಂಚಿನ ಪುತ್ಥಳಿಯ ಪ್ರತಿಷ್ಠಾಪನೆ



ದಾವಣಗೆರೆ, ಅ. 19 - ಆರೂಢ ದಾಸೋಹಿ ಮಾಗನೂರು ಬಸಪ್ಪನವರ ಕಂಚಿನ ಪುತ್ಥಳಿಯ ಮೆರವಣಿಗೆಯು ನಿನ್ನೆ ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ನಂತರ ಬೈಕ್ ರ‍್ಯಾಲಿಯೊಂದಿಗೆ ವಿದ್ಯಾನಗರದ ಈಶ್ವರ - ಪಾರ್ವತಿ- ದೇವಸ್ಥಾನ ತಲುಪಿ, ಕುಂಭಮೇಳದೊಂದಿಗೆ ಮಾಗನೂರು ಬಸಪ್ಪ ಶಾಲಾ ಸಮುಚ್ಚಯದ ಆವರಣದಲ್ಲಿ ನೂತನ ಕಂಚಿನ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಯಿತು. ತರಳಬಾಳು ಬೃಹನ್ಮಠದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪುತ್ಥಳಿಯ ಅನಾವರಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.


**ಜನ್ಮ ದಿನದ ಶುಭಾಶಯಗಳು**

ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರೂ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳೂ, ಕಲಾ ಪ್ರಕಾಶ ವೃಂದದ ನಿರ್ದೇಶಕರೂ, ಸಹಕಾರಿ ಧುರೀಣರೂ ಆದ

**ಶ್ರೀ ಎನ್.ಎ. ಮುರುಗೇಶ್**

ಅವರಿಗೆ ಜನ್ಮ ದಿನದ ಶುಭಾಶಯಗಳು.





**ಬೆಳ್ಳೂಡಿ ಶಿವಕುಮಾರ**

ಶ್ರೀ ಶೈಲ ಮಲ್ಲಿಕಾರ್ಜುನ ಟ್ರಾನ್ಸ್ ಪೋರ್ಟ್ (ರಿ.)

ವೊಡ್ಡಿನಹಳ್ಳಿ ಕ್ರಾಸ್, ಪಿ.ಬಿ.ರೋಡ್, ದಾವಣಗೆರೆ.

9448119815, 9483619815


## ವೈದ್ಯರ ಸೇವೆ ಇನ್ನು ಕಡ್ಡಾಯವಿಲ್ಲ

(1ನೇ ಪುಟದಿಂದ) ಹೇಳಿದರು.

ಗ್ರಾಮೀಣ ಭಾಗದಲ್ಲಿ ಮನೆ ಬಾಗಿಲಿಗೆ ನ್ಯಾಯ ಒದಗಿಸಲು 100 ಗ್ರಾಮ ನ್ಯಾಯಾಲಯಗಳ ಸ್ಥಾಪನೆಗೂ ರಾಜ್ಯ ಸಂಪುಟ ಒಪ್ಪಿಗೆ ನೀಡಿದೆ. ಪಂಚಾಯ್ತಿ ಇಲ್ಲವೇ ಪಂಚಾಯ್ತಿಗಳ ಕ್ಲಸ್ಟರ್ ಹಂತದಲ್ಲಿ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು. ಇವು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಹಂತದಲ್ಲಿ ಕಾರ್ಯನಿರ್ವಹಿಸಲಿವೆ. ಈ ನ್ಯಾಯಾಲಯಗಳಿಗಾಗಿ 100 ಕೋಟಿ ರೂ. ಅನುದಾನ ನೀಡಲು ಸಮ್ಮತಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ರಾಜ್ಯದ 11 ಪೊಲೀಸ್ ತರಬೇತಿ ಶಾಲೆಗಳನ್ನು ಬಲಗೊಳಿಸಲು 20 ಕೋಟಿ ರೂ. ಒದಗಿಸುವ ಪ್ರಸ್ತಾವನೆಗೂ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.


ಮನೆ, ವಾಣಿಜ್ಯ, ಕೈಗಾರಿಕಾ ಉದ್ದೇಶ ಹಾಗೂ ವಾಹನಗಳಿಗೆ ಅಡುಗೆ ಅನಿಲವನ್ನು ಕೊಳವೆ ಮೂಲಕ ಪೂರೈಸುವ ಕುರಿತ ರಾಜ್ಯ ನೀತಿಗೂ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿದೆ. ಈ ನೀತಿಯು ಅಡುಗೆ ಅನಿಲ ಬಳಕೆಗೆ ಉತ್ತೇಜನ ನೀಡಲಿದೆ. ಸ್ಥಳೀಯ ಸಂಸ್ಥೆಗಳ ಜೊತೆಗೂಡಿ ಬಯೋಗ್ಯಾಸ್ ಘಟಕಗಳ ಸ್ಥಾಪನೆಗೂ ನೆರವಾಗಲಿದೆ.

ಪ್ರತಿ ತಿಂಗಳು ಗೃಹಿಣಿಯರಿಗೆ 2 ಸಾವಿರ ರೂ. ನೆರವು ನೀಡುವ ಗೃಹ ಲಕ್ಷ್ಮಿ ಯೋಜನೆಗೂ ಸಂಪುಟ ಘಟನೋತ್ತರ ಅನುಮತಿ ನೀಡಿದೆ. ಇದೇ ವೇಳೆ, ಅನ್ನಭಾಗ್ಯ ಯೋಜನೆಯಡಿ ಐದು ಕೆ.ಜಿ. ಹೆಚ್ಚುವರಿ ಅಕ್ಕಿಯ ಬದಲು ಹಣ ನೀಡುವ ಯೋಜನೆ ಮುಂದುವರೆಸಲು ನಿರ್ಧರಿಸಲಾಗಿದೆ.

ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯಗೊಳಿಸುವ ನಿಯಮವನ್ನು ಬದಲಿಸಲು ನಿರ್ಧರಿಸಲಾಗಿದೆ. ಇದುವರೆಗೂ ವೈದ್ಯಕೀಯ ಪರೀಕ್ಷೆ ಪೂರೈಸಿದ ಎಲ್ಲರೂ ಗ್ರಾಮೀಣ ಸೇವೆ ಸಲ್ಲಿಸುವುದು ಕಡ್ಡಾಯವಾಗಿತ್ತು. ಇನ್ನು ಮುಂದೆ, ಸರ್ಕಾರಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ಅರ್ಹತೆ ಆಧರಿಸಿ ಇವರ ಸೇವೆಯನ್ನು ಬಳಸಿಕೊಳ್ಳಲಾಗುವುದು.


**ಜನ್ಮ ದಿನದ ಶುಭಾಶಯಗಳು**

ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ಮಾಜಿ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳು, ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳು ಮತ್ತು ನಮ್ಮ ಕಲಾ ಪ್ರಕಾಶ ವೃಂದದ ನಿರ್ದೇಶಕರು ಆದ



**ಶ್ರೀಯುತ ಎನ್.ಎ. ಮುರುಗೇಶ್**

ಇವರಿಗೆ ಜನ್ಮ ದಿನದ ಶುಭಾಶಯಗಳು.

ಶ್ರೀಯುತರಿಗೆ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯ ನೀಡಿ ಅವರಿಗೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯವನ್ನು ನೀಡಲಿ ಎಂದು ಶುಭ ಹಾರೈಸುತ್ತೇವೆ.

**ರಮಣ್‌ಲಾಲ್ ಪಿ. ಸಂಘವಿ** – ಗೌರವ ಅಧ್ಯಕ್ಷರು

**ಎಸ್.ಕೆ. ವೀರಣ್ಣ** – ಗೌರವ ಪ್ರಧಾನ ಕಾರ್ಯದರ್ಶಿ

**ಶ್ರೀ ಕುಬೇರಪ್ಪ ಎ.ಹೆಚ್.** – ಅಧ್ಯಕ್ಷರು

**ಶ್ರೀ ಹೆಚ್.ಎಸ್. ಗುರುನಾಥ್** – ಉಪಾಧ್ಯಕ್ಷರು

**ಶ್ರೀ ಕಿರುವಾಡಿ ವಿ. ಸೋಮಶೇಖರ್** – ಪ್ರಧಾನಕಾರ್ಯದರ್ಶಿ

**ಶ್ರೀಮತಿ ಬಿ. ಅನಸೂಯ** – ಸಹ ಕಾರ್ಯದರ್ಶಿ

**ನಿರ್ದೇಶಕರುಗಳು :**

- ✦ ಶ್ರೀ ಪೆ.ನಾ. ಗೋಪಾಲರಾವ್
- ✦ ಶ್ರೀ ಜಿ.ಕೆ. ಪಂಚಣ್ಣ
- ✦ ಶ್ರೀ ಟಿ. ನಿಜಲಿಂಗಯ್ಯ
- ✦ ಶ್ರೀ ಎಸ್.ಕೆ. ಪ್ರಭುಪ್ರಸಾದ್
- ✦ ಶ್ರೀ ಬಿ. ಚಿದಾನಂದಪ್ಪ
- ✦ ಶ್ರೀಮತಿ ಉಮಾ ವಾಗೀಶ್
- ✦ ಶ್ರೀ ಅನುಪಾ ಡಾ. ವೀರೇಂದ್ರಸ್ವಾಮಿ
- ✦ ಶ್ರೀ ಕೆ. ತಿಮ್ಮಪ್ಪ
- ✦ ಶ್ರೀ ವಿ. ಬಸವರಾಜಯ್ಯ
- ✦ ಶ್ರೀಮತಿ ಜಯಮ್ಮ ಪರಶುರಾಮಪ್ಪ
- ✦ ಶ್ರೀ ಬಿ. ವೀರೇಶ್
- ✦ ಶ್ರೀ ವಿಶಾಲ್ ಕುಮಾರ್ ಆರ್.
- ✦ ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್
- ✦ ಶ್ರೀ ಎನ್. ತುಳಸೀನಾಥ್

**ಸಿಬ್ಬಂದಿ ವರ್ಗ**

**ಕಲಾ ಪ್ರಕಾಶ ವೃಂದ (ರಿ.)**

ದಾವಣಗೆರೆ – ಹರಿಹರ ಅರ್ಬನ್ ಕೋ–ಆಪ್. ಬ್ಯಾಂಕ್ ಸಹಕಾರ ಸಮುದಾಯ ಭವನ ,

ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.





ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರೂ, ದಾವಣಗೆರೆ ಪಟ್ಟಣ ಸಹಕಾರ ಬ್ಯಾಂಕ್‌ಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳೂ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳೂ, ಕಲಾ ಪ್ರಕಾಶ ವೃಂದದ ನಿರ್ದೇಶಕರೂ, ಯುವ ಸಹಕಾರಿ ಧುರೀಣರೂ ಆದ

**ಶ್ರೀ ಎನ್.ಎ. ಮುರುಗೇಶ್**

ಇವರಿಗೆ ಜನ್ಮ ದಿನದ ಶುಭಾಶಯಗಳು.



ಮುರುಗೇಶ್ ಬಿ. ಹಂಚಿನ್



ವೀರೇಶ್ ಕೋಟಿ


ಪಾಲುದಾರರು

**ಬಿ.ಎಸ್.ವಿ. ಅರ್ಥ್ ಮೂವರ್ಸ್, ಭೀಮಸಮುದ್ರ**



**ಹುಟ್ಟುಹಬ್ಬದ ಶುಭಾಶಯಗಳು**

ನಮ್ಮ ಬ್ಯಾಂಕಿನ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟದ ಗೌರವ ಕಾರ್ಯದರ್ಶಿಗಳು, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿಗಳು, ಕಲಾ ಪ್ರಕಾಶ ವೃಂದದ ನಿರ್ದೇಶಕರು, ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟದ ಮಾಜಿ ಅಧ್ಯಕ್ಷರು, ನಗರದ ಶ್ರೀಶೈಲ ಪೀಠದ ಸದಸ್ಯರು, ಸದಾ ಹಸನ್ಮುಖಿ, ಜನಾನುರಾಗಿ, ಸಮಾಜಮುಖಿ, ಸಹಕಾರಿ ಯುವ ಧುರೀಣರು ಹಾಗೂ ಯಾವಾಗಲೂ ಬ್ಯಾಂಕಿನ ಸಿಬ್ಬಂದಿ ವರ್ಗದವರ ಶ್ರೇಯೋಭಿವೃದ್ಧಿಯನ್ನು ಬಯಸುವ



**ಶ್ರೀ ಎನ್.ಎ. ಮುರುಗೇಶ್**

ಇವರಿಗೆ ಹುಟ್ಟು ಹಬ್ಬದ ಶುಭಾಶಯಗಳು.

ಶ್ರೀಯುತರಿಗೆ ಭಗವಂತನು ಇನ್ನೂ ಹೆಚ್ಚಿನ ಆಯುರಾರೋಗ್ಯ, ಭಾಗ್ಯ ನೀಡಿ, ಮತ್ತಷ್ಟು ಸಮಾಜಮುಖಿಯಾಗಿ ಬ್ಯಾಂಕಿಂಗ್ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆಯನ್ನು ಮಾಡುವ ಚೈತನ್ಯ ಹಾಗೂ ಸಾಮರ್ಥ್ಯ ನೀಡಲಿ ಎಂದು ಶುಭ ಹಾರೈಸುತ್ತೇವೆ.

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ನಿಯಮಿತ ಎಂಪ್ಲಾಯೀಸ್ ಅಸೋಸಿಯೇಷನ್ (ರಿ)**

## ಎನ್.ಸಿ.ಪಿ. ಶಾಸಕ ಖಡ್ಸೆ, ಬಿಜೆಪಿ ಸಂಸದೆ ರಕ್ಷಾಗೆ 137 ಕೋ.ರೂ. ದಂಡ

ಮುಂಬೈ, ಅ. 19 – ತಮ್ಮ ಜಮೀನಿನಲ್ಲಿ ಅಕ್ರಮವಾಗಿ ಮಣ್ಣು ಅಗೆದಿದ್ದ ಕಾರಣಕ್ಕಾಗಿ ಎನ್.ಸಿ.ಪಿ. ಶಾಸಕ ಏಕನಾಥ ಖಡ್ಸೆ ಹಾಗೂ ಅವರ ಸೊಸೆ ಬಿಜೆಪಿ ಸಂಸದೆ ರಕ್ಷಾ ಖಡ್ಸೆ ಅವರು 137 ಕೋಟಿ ರೂ. ದಂಡ ಪಾವತಿಸುವಂತೆ ಮಹಾರಾಷ್ಟ್ರದ ಜಲಗಾಂವ್ ಜಿಲ್ಲಾಡಳಿತ ಆದೇಶಿಸಿದೆ. ಹೆಚ್ಚುವರಿ ಅನುಮತಿ ಪಡೆಯದೇ ಮಣ್ಣು ಹಾಗೂ ಕಲ್ಲುಗಳನ್ನು ಅಗೆದಿರುವ ಕಾರಣಕ್ಕಾಗಿ ದಂಡ ವಿಧಿಸಿ ಅಕ್ಟೋಬರ್ 6ರಂದು ಆದೇಶ ಹೊರಡಿಸಲಾಗಿದೆ.

## ಭಾರತದಲ್ಲಿ ಪಿಕ್ಸಲ್ ಫೋನ್ ಉತ್ಪಾದನೆ


ನವದೆಹಲಿ, ಅ. 19 – ಪಿಕ್ಸಲ್ ಸರಣಿಯ ಸ್ಮಾರ್ಟ್‌ಫೋನ್‌ಗಳನ್ನು ಭಾರತದಲ್ಲಿ ರೂಪಿಸಲಾಗುವುದು ಹಾಗೂ 2024ರ ನಂತರ ಇವುಗಳು ಲಭ್ಯವಾಗಲಿವೆ ಎಂದು ಗೂಗಲ್ ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತದಲ್ಲಿ ಪಿಕ್ಸಲ್ ಫೋನ್‌ಗಳನ್ನು ಉತ್ಪಾದಿಸಲು ಅಂತರ ರಾಷ್ಟ್ರೀಯ ಉತ್ಪಾದಕರ ಜೊತೆ ಕೈ ಜೋಡಿಸಲಾಗುವುದು ಎಂದು ಗೂಗಲ್ ಉಪಕರಣ ಹಾಗೂ ಸೇವೆಗಳ ವಿಭಾಗದ ಹಿರಿಯ ಉಪಾಧ್ಯಕ್ಷ ರಿಕ್ ಒಸ್ಟ್ರೋಲೋ ಹೇಳಿದ್ದಾರೆ. ಟೆಲಿಕಾಂ ಸಚಿವ ಅಶ್ವಿನಿ ಉಪಾಧ್ಯಾಯ್ ಅವರ ಉಪಸ್ಥಿತಿಯಲ್ಲಿ ಒಸ್ಟ್ರೋಲೋ ಈ ಘೋಷಣೆ ಮಾಡಿದ್ದಾರೆ.

## ಪ್ರಾಥಮಿಕ ಶಿಕ್ಷಕರ ಸ್ಥಳ ಆಯ್ಕೆಯ ಕೌನ್ಸಿಲಿಂಗ್ ಪ್ರಕ್ರಿಯೆ

ದಾವಣಗೆರೆ, ಅ. 19 - ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ 6 ರಿಂದ 8ನೇ ತರಗತಿಯಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ಸ್ಥಳ ಆಯ್ಕೆಯ ಕೌನ್ಸಿಲಿಂಗ್ ಪ್ರಕ್ರಿಯೆ ಅ.21 ರಂದು ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ಹೈಸ್ಕೂಲ್ ಮೈದಾನದ ಹತ್ತಿರ ನಡೆಯಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಕೊಟ್ರೇಶ್ ತಿಳಿಸಿದ್ದಾರೆ.







## ಮುಂಗಾರಿಗೆ ಸಂಪೂರ್ಣ ತೆರೆ

ನವದೆಹಲಿ, ಅ. 19 – ಮುಂ ಗಾರು ಮಳೆ ಗುರುವಾರದಂದು ಸಂಪೂರ್ಣವಾಗಿ ದೇಶದಿಂದ ಹಿಂದೆ ಸರಿದಿದೆ.

ಸಾಮಾನ್ಯವಾಗಿ ಅಕ್ಟೋಬರ್ 15ರಂದು ಮುಂಗಾರು ಅಂತ್ಯ ವಾಗುತ್ತದೆ. ಈ ಬಾರಿ ನಾಲ್ಕು ದಿನ ತಡವಾಗಿ ಮುಂಗಾರಿಗೆ ತೆರೆ ಬಿದ್ದಿದೆ.

ಸೆಪ್ಟೆಂಬರ್ 25ರಿಂದ ಮುಂ ಗಾರು ಹಿಂದೆ ಸರಿಯಲು ಆರಂಭಿ ಸಿತ್ತು. ಹಿಂದೆ ಸರಿಯುವ ಪ್ರಕ್ರಿಯೆ 8 ದಿನ ತಡವಾಗಿ ಆರಂಭವಾಗಿತ್ತು.

ಈ ವರ್ಷ ವಾಡಿಕೆಯ 868.6 ಮಿ.ಮೀ. ಮಳೆಯ ಬದಲು 820 ಮಿ.ಮೀ. ಮಳೆ ಸುರಿದಿದೆ.

ಎಲ್ ನೀನೋ ಕಾರಣದಿಂದ ಮುಂಗಾರಿನಲ್ಲಿ ಕೊರತೆಯಾಗಿದೆ. ಮುಂದಿನ ಮೂರು ದಿನಗಳಲ್ಲಿ ಹಿಂಗಾರು ಆರಂಭವಾಗಲಿದೆ.

ಆದರೆ, ಆರಂಭದಲ್ಲಿ ಹಿಂಗಾರು ದುರ್ಬಲವಾಗಿರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

